# ಕೇರಳ ಪಾಠಾವಳಿ
# KERALA READER

# ಕನ್ನಡ
# KANNADA

# ಮೂಲ ಪಠ್ಯ
# BASIC TEXT

ತರಗತಿ

V

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

ST-495-1-KANNADA(BT)5

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ.ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - V (Basic Text)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA - V BT

**Advisor**

| | |
|---|---|
| Shivashankara P. | Asst. Professor, GPM College, Manjeshwar |

**Chairman**

| | |
|---|---|
| Dr. Rathnakara Mallamoole | Associate Professor, Govt.College, Kasaragod |

**Experts**

| | |
|---|---|
| Padmanabha Poojary | Rtd.Professor, Govt.College, Kasaragod |
| Dr. M.N. Mahesha | HOD Kannada Department, Madurai Kamaraj University |

**Participants**

| | |
|---|---|
| Vijaya Kumar P. | B.R.C Manjeshwara |
| Shrinivasa K.H. | UPST, AUPS Dharmathadka |
| Sumithra K | HST , GHSS Paivalike Nagar |
| Revathi | UPST , VAUPS Miyapadavu |
| Sarvamangala Rao | UPST, GUPS Kasaragod |
| Sharath Kumar M. | UPST, ASBS Kuntikana |
| Devaki | PD Teacher, GHSS Chandragiri |

**Artists**

| | |
|---|---|
| Prakash P. | Specialist Teacher (Drawing), BRC Manjeshwara |
| Sathyanarayana Aila | Drawing Teacher, GHSS Mangalpady |

**Academic Co-ordinator**

Dr. Sahaya Dhas D.
Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

## ಅನುಕ್ರಮಣಿಕೆ


| ಕ್ರಮಸಂಖ್ಯೆ | ವಿಷಯ | ಪುಟಗಳು |
|---|---|---|
| 1. | **ಸಂಸ್ಕೃತಿ ಸೌರಭ** | **7-25** |
| | * ಮನೆ ತುಂಬಿಸುವುದು | |
| | * ಭೂತಾಳ ಪಾಂಡ್ಯ | |
| | * ಜಟ್ಟಿಯ ಫಜೀತಿ | |
| 2. | **ಸೌಖ್ಯ ಸಂಜೀವಿನಿ** | **26-45** |
| | * ಹೊಟ್ಟೆಬಾಕ ಶಿಷ್ಯ | |
| | * ಸರ್ವಜ್ಞನ ವಚನಗಳು | |
| | * ಮೂಗಾಯಣ | |
| 3. | **ಬದುಕು ಬಂಗಾರ** | **46-65** |
| | * ಹೀಗೊಬ್ಬ ಭಗೀರಥ | |
| | * ದುಡಿಮೆ | |
| | * ಬದುಕಿನ ತುಡಿತ | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# 1. ಸಂಸ್ಕೃತಿ ಸೌರಭ



## ❑ ಪ್ರವೇಶ ಚಟುವಟಿಕೆ



ಚಿನ್ನದ ಬಟ್ಟಲ ಈ ತುಳುನಾಡು
ನೋಡಲು ಸಾವಿರ ಕಣ್ಣಳೆ ಬೇಕು
....................................
....................................
....................................
....................................

ಮೂಡಣಗಟ್ಟ ಪಡುವಣ ಕಡಲು
ತೆಂಗಿನ ಕಂಗಿನ ಬಾಳೆಯ ನೆರಳು
....................................
....................................
....................................
....................................



....................................
....................................
ಬಗೆಬಗೆ ಕುಣಿತ ಕಂಬಳ ಕೋಲ
ಗರಡಿಯ ಸಾಧಕ ಆಟದ ಮೇಳ
....................................
....................................

ಹೆಣ್ಣಾಳಿಕೆಯ ಚೆಲುವಿನ ಮಣ್ಣು
ಪುಣ್ಯದ ಹರಿವು ಐಸಿರಿ ಕಣ್ಣು
....................................
....................................

ನಮ್ಮಯ ತುಳುನಾಡು
ಹೆಮ್ಮೆಯ ಕರೆನಾಡು

**- ಪ್ರೊ. ಅಮೃತ ಸೋಮೇಶ್ವರ**

ಮೇಲಿನ ಸಾಲುಗಳನ್ನು ಓದಿದಿರಲ್ಲವೇ. ನಿಮ್ಮ ಅಭಿಪ್ರಾಯ ಬರೆಯಿರಿ.

# ಮನೆ ತುಂಬಿಸುವುದು

ಗಣೇಶ ಚೌತಿಯ ಸಂದರ್ಭದಲ್ಲಿ ಗದ್ದೆಯಲ್ಲಿ ಭತ್ತ ಬೆಳೆಯುತ್ತಿರುತ್ತದೆ. ಅಲ್ಲಿಂದ ಕೆಲವು ತೆನೆಗಳನ್ನು ತಂದು ವಿದ್ಯುಕ್ತವಾಗಿ ಮನೆಯಲ್ಲಿ ಕಟ್ಟುವುದನ್ನು 'ಮನೆ ತುಂಬಿಸುವುದು' ಎನ್ನುತ್ತಾರೆ. ಇದು ಹೆಚ್ಚಾಗಿ ಗಣೇಶ ಚೌತಿಯಂದೇ ನಡೆಯುತ್ತದೆ. ಮನೆ ತುಂಬಿಸುವ ದಿನ ನಿರ್ಧಾರ ಮಾಡಿ, ಅದಕ್ಕೆ ವಾರ ಮುಂಚಿತವಾಗಿ ಅಟ್ಟಗುಡಿಸುವ ಕೆಲಸ ಮಾಡುತ್ತಾರೆ. ಆ ದಿನ ಇಡೀ ಮನೆಯನ್ನು ಎಚ್ಚರಿಕೆಯಿಂದ ಗುಡಿಸುತ್ತಾರೆ. ಅಟ್ಟದಲ್ಲಿರುವ ಕರಿ-ಬಲೆಗಳನ್ನೆಲ್ಲ ತೆಗೆದು, ಮನೆಯಲ್ಲಿರುವ ಪಾತ್ರೆಗಳನ್ನೆಲ್ಲ ವಿಶೇಷವಾಗಿ ತೊಳೆಯುತ್ತಾರೆ. ಬೆಂಚು, ಮಣೆ, ಚಾಪೆ, ಹೊದಿಕೆಗಳನ್ನು ಬಿಡದೆ ತೊಳೆಯುತ್ತಾರೆ. ಒಟ್ಟಿನಲ್ಲಿ ಇಡೀ ಮನೆಯೇ ಹೊಸದಾಗಿ ಹೊಳೆಯುವಂತೆ ಮಾಡುತ್ತಾರೆ. ಸೆಗಣಿ ಸಾರಿಸಿ ಇಡೀ ನೆಲವನ್ನು ಶುಭ್ರ ಮಾಡುತ್ತಾರೆ. ನಿಗದಿಪಡಿಸಿದ ದಿನದಂದು ಮನೆಯ ಯಜಮಾನ ಮುಂಜಾನೆ ಎದ್ದು ಸ್ನಾನ ಮಾಡಿ, ಮಡಿ ಉಟ್ಟು ಗದ್ದೆಗೆ ಹೋಗುತ್ತಾನೆ. ಬೆಳೆದು ನಿಂತಿದ್ದ ಭತ್ತದ ತೆನೆಯನ್ನು ಬುಡದಿಂದ ಕತ್ತರಿಸಿ ಎಷ್ಟು ಬೇಕೋ ಅಷ್ಟನ್ನು ಎತ್ತಿಕೊಂಡು 'ಪೊಲಿ ಪೊಲಿ' ಎನ್ನುತ್ತಾ ಅಂಗಳದಲ್ಲಿ ತಂದಿಡುವನು. ಇಷ್ಟರಲ್ಲಿ ಮನೆ ತುಂಬಿಸಲು ಬೇಕಾದ ಇತರ ವಸ್ತುಗಳು ಸಿದ್ಧವಾಗಿರಬೇಕು.



ಅವೆಂದರೆ ಮಾವಿನೆಲೆ, ಹಲಸಿನೆಲೆ, ಬಿದಿರು ಸೊಪ್ಪು, ಪೊಲಿ ಸೊಪ್ಪು ಮತ್ತು ದಡ್ಡಲ್ ಮರದ ಕೆತ್ತೆಯಿಂದ ಮಾಡಿದ ಹಗ್ಗ.ಮನೆಯವರೆಲ್ಲರು ಸ್ನಾನ ಮಾಡಿ ಆನಂತರ ಎಲ್ಲವನ್ನು ಬುಟ್ಟಿಗೆ ತುಂಬಿಸಿ ಕನ್ನಿಕಂಬದ ಬುಡಕ್ಕೆ ತಂದಿಡುವರು. ಅಲ್ಲಿ ಒಂದು ದೀಪ ಉರಿಸಿಟ್ಟು ದೀಪಕ್ಕೆ ಅಕ್ಕಿ ಹಾಕಿ ಕೈಮುಗಿಯಬೇಕು. ಗಂಧದ ಬೊಟ್ಟು ಹಾಕಿಕೊಂಡ ಅನಂತರ ಕದಿರು ತಯಾರು ಮಾಡುವರು.

ಎರಡು ಮಾವಿನೆಲೆಯ ಮೇಲೆ ಒಂದು ಹಲಸಿನೆಲೆ ಇಟ್ಟು, ಬಿದಿರೆಲೆ ಮತ್ತು ಪೊಲಿ ಸೊಪ್ಪು ಅದಕ್ಕೆ ಸೇರಿಸಿ, ಹೊರಗೆ ಇಳಿಬಿಟ್ಟಿರುವಂತೆ ಭತ್ತದ ತೆನೆಯನ್ನು ಸೇರಿಸಿ ಗಟ್ಟಿಯಾಗಿ ಕಟ್ಟುವಾಗ ಹೆಂಗಳೆಯರು ಶೋಭಾನೆ ಹಾಡುತ್ತಾರೆ.



ಮಾಲಕ್ಷ್ಮಿ ಬರುವಾಗ ಇದ್ದೇವು ಅಂಗಳದಿ
ದೃಷ್ಟಿಗಾರತಿಯೂ ಹಿಡಿದಿದ್ದ ಗಳಿಗೇಲಿ
ಮಾಲಕ್ಷ್ಮಿ ಬಂದು ಒಲಿದಾಳು

ಮಾಲಕ್ಷ್ಮಿ ಬರುವಾಗ ಇದ್ದೇವು ಜಗ್ಲೀಲಿ
ಹೂವಿನಾರತೀಯ ಹಿಡಿದಿದ್ದ ಗಳಿಗೇಲಿ
ಮಾಲಕ್ಷ್ಮಿ ಬಂದು ಒಲಿದಾಳು



ಮಾಲಕ್ಷ್ಮಿ ಬರುವಾಗ ಇದ್ದೇವು ಮಾಳಿಗೇಲಿ
ಗಂಧಧೂಪವೂ ಹಿಡಿದಿದ್ದ ಗಳಿಗೇಲಿ
ಮಾಲಕ್ಷ್ಮಿ ಬಂದು ಒಲಿದಾಳು

ಹಾಡುತ್ತಿದ್ದಂತೆ ಕದಿರನ್ನು ಮನೆಯ ಪ್ರಮುಖ ಜಾಗಗಳಿಗೆ ಒಂದೊಂದರಂತೆ ಕಟ್ಟುತ್ತಾರೆ. ಬಾಗಿಲು, ಕಿಟಕಿ, ಏಣಿ, ಕೊಟ್ಟಿಗೆ, ಹಟ್ಟಿ, ಬಾವಿ, ನೊಗ, ನೇಗಿಲು, ಅಟ್ಟ, ಕನ್ನಿಕಂಬ ಮೊದಲಾದ ಕಡೆ ಸುಮಾರು ಇಪ್ಪತ್ತರಿಂದ ಮೂವತ್ತರವರೆಗೆ ಕದಿರು ಕಟ್ಟುತ್ತಾರೆ. ಹೀಗೆ ಕಟ್ಟಿ ಉಳಿದ ಕದಿರು ಸೊಪ್ಪುಗಳನ್ನೆಲ್ಲ ಒಂದು ಬುಟ್ಟಿಗೆ ಹಾಕಿ 'ಪೊಲಿ ಪೊಲಿ ಪೊಲಿ' ಎನ್ನುತ್ತಾ ಅಟ್ಟಕ್ಕೆ ಸಾಗಿಸುವರು. ಅನಂತರ ಅದನ್ನು ಒಂದು ವರ್ಷದವರೆಗೆ ಯಾರೂ ಮುಟ್ಟಬಾರದು.

ಈ ಆಚರಣೆ ಭತ್ತವನ್ನು ಮೊದಲ ಬಾರಿಗೆ ಮನೆಗೆ ತರುವಾಗ ತೋರುವ ಗೌರವದ ಸಂಕೇತವಾಗಿದೆ. 'ಸದಾ ವೃದ್ಧಿ ಇರಲಿ' ಎಂಬ ಆಶಯ ಇಲ್ಲಿನದು.

(ಆಚರಣೆಯ ರೀತಿಯಲ್ಲಿ ಪ್ರಾದೇಶಿಕವಾದ ವ್ಯತ್ಯಾಸವನ್ನು ಕಾಣಬಹುದು.)

**- ಪುರುಷೋತ್ತಮ ಬಿಳಿಮಲೆ**

## ಲೇಖಕರ ಪರಿಚಯ



ಡಾ. ಪುರುಷೋತ್ತಮ ಬಿಳಿಮಲೆ ಅವರು 1955 ಆಗಸ್ಟ್ 21 ರಂದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಜ ಗ್ರಾಮದ ಬಿಳಿಮಲೆಯಲ್ಲಿ ಜನಿಸಿದರು. ಇವರು ಹಂಪಿ ವಿಶ್ವವಿದ್ಯಾಲಯ ಹಾಗೂ ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಇವರು ಕಂಬಳ, ಕರಾವಳಿ ಜಾನಪದ, ಹುಲಿಗೆಮ್ಮ, ಕುಮಾರರಾಮ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಆರ್ಯಭಟ ಪ್ರಶಸ್ತಿ, ಕು.ಶಿ. ಜಾನಪದ ಪ್ರಶಸ್ತಿ, ಅಕ್ಷರ ಸಿರಿ ಪ್ರಶಸ್ತಿ (2014) ಮೊದಲಾದವುಗಳು ಇವರಿಗೆ ಸಂದ ಗೌರವಗಳು.

## ಚಟುವಟಿಕೆಗಳು

### ಉತ್ತರಿಸಿರಿ

1. ಮನೆ ತುಂಬಿಸುವುದು ಎಂದರೇನು?
2. ಮನೆ ತುಂಬಿಸುವ ಮೊದಲು ಯಾವೆಲ್ಲಾ ತಯಾರಿಗಳನ್ನು ಮಾಡುತ್ತಾರೆ?
3. ಮನೆ ತುಂಬಿಸಲು ಬೇಕಾದ ವಸ್ತುಗಳು ಯಾವುವು?
4. ಮನೆ ತುಂಬಿಸಲು ಉಪಯೋಗಿಸುವ ಕದಿರನ್ನು ಹೇಗೆ ತಯಾರು ಮಾಡುತ್ತಾರೆ?
5. ಕದಿರನ್ನು ಮನೆಯ ಯಾವೆಲ್ಲ ಭಾಗಗಳಿಗೆ ಪ್ರಮುಖವಾಗಿ ಕಟ್ಟುತ್ತಾರೆ?

## ಚರ್ಚಿಸಿರಿ

ಮನೆ ತುಂಬಿಸುವುದು ಪಾಠ ಓದಿದಿರಲ್ಲವೇ? ಈ ರೀತಿಯ ಇತರ ಯಾವೆಲ್ಲ ಆಚರಣೆಗಳು ನಿಮ್ಮ ಊರಿನಲ್ಲಿದೆ? ಯಾವುದಾದರೂ ಒಂದು ಆಚರಣೆಯ ಕುರಿತು ಒಂದು ಟಿಪ್ಪಣಿ ಬರೆಯಿರಿ. (ಉದಾ : ವಿಷು ಆಚರಣೆ ಅಥವಾ ಹೊಸ ಅಕ್ಕಿ ಊಟ)

## ಪತ್ರ ಬರೆಯಿರಿ

- ವಿವಿಧ ಹಬ್ಬಗಳ ಆಚರಣೆಯು ನಮ್ಮ ಸಂಸ್ಕೃತಿಯ ಭಾಗವಲ್ಲವೇ?

ಶಾಲೆಯಲ್ಲಿ ನಡೆದ ಓಣಂ ಹಬ್ಬದ ಆಚರಣೆಯ ಕುರಿತು ನಿಮ್ಮ ಗೆಳೆಯ ಅಥವಾ ಗೆಳತಿಗೆ ಒಂದು ಪತ್ರ ಬರೆಯಿರಿ.

## ಭಿತ್ತಿ ಪತ್ರ




ಜಾಲರ ಹಳ್ಳಿಯ ಕುಟುಂಬಶ್ರೀಯವರು ಆಯೋಜಿಸಿದ 'ಕೆಸರ್ಡೋಂಜಿ ದಿನ' (ಕೆಸರು ಗದ್ದೆಯಲ್ಲಿ ಒಂದು ದಿನ) ಕಾರ್ಯಕ್ರಮದ ಭಿತ್ತಿ ಪತ್ರವನ್ನು ಗಮನಿಸಿದಿರಲ್ಲವೇ? ನಮ್ಮ ಶಾಲೆಯಲ್ಲಿ ನಡೆಯುವ ದಸರಾ ನಾಡಹಬ್ಬದ ಆಚರಣೆಯ ಕುರಿತು ಒಂದು ಆಕರ್ಷಕ ಭಿತ್ತಿ ಪತ್ರವನ್ನು ತಯಾರಿಸಿ.

## ಸಂಚಿಕೆ ತಯಾರಿ

ಹಬ್ಬಗಳಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿ ಒಂದು ಸಂಚಿಕೆ ತಯಾರಿಸಿರಿ.

## ಪದವಿಂಗಡಿಸಿ ಬರೆಯಿರಿ

ಮಾದರಿ: ಬೆಳೆಯುತ್ತಾ + ಇರುತ್ತದೆ - ಬೆಳೆಯುತ್ತಿರುತ್ತದೆ

- ಮನೆಯವರೆಲ್ಲರು
- ಒಂದೊಂದರಂತೆ
- ಹಿಡಿದಿದ್ದ
- ಸಿದ್ಧವಾಗಿರಬೇಕು

## ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿರಿ.

- ಇಡೀ ದಿನ ಮನೆಯನ್ನು ಎಚ್ಚರಿಕೆಯಿಂದ ಗುಡಿಸುತ್ತಾರೆ.
- ನಿಗದಿಪಡಿಸಿದ ದಿನದಂದು ಮನೆಯ ಯಜಮಾನ ಮುಂಜಾನೆದ್ದು ಸ್ನಾನ ಮಾಡಿ ಮಡಿ ಉಟ್ಟು ಗದ್ದೆಗೆ ಹೋಗುತ್ತಾನೆ.
- ಮನೆ ತುಂಬಿಸುವ ದಿನದ ವಾರ ಮುಂಚಿತವಾಗಿ ಅಟ್ಟಗುಡಿಸುವ ಕೆಲಸ ಮಾಡುತ್ತಾರೆ.


# ಭೂತಾಳ ಪಾಂಡ್ಯ

ಸಾವಿರ ವರ್ಷದ ಹಿಂದಕೆ ನಡೆಯಿತು
ಕಥೆಯೊಂದನು ಹೇಳುವೆ ಕಂದ
ಯಾವನ ಕಾಲದಿ ಯಾತಕೆ ಹುಟ್ಟಿತು
ಅಳಿಯ ಕಟ್ಟೆನುತ - ತಿಳಿ ಚಂದ

ಪಾಂಡ್ಯ ದೇಶದಲಿ ವರ್ತಕನಿದ್ದನು
ದೇವಪಾಂಡ್ಯ ಬಲು ಸಿರಿವಂತ
ತಂಡ ತಂಡದಲಿ ಹಡಗವ ಸಾಗಿಸಿ
ದುಡ್ಡು ಗಳಿಸಿದನು ಗುಣವಂತ

ಮನ್ನಣೆ ಸಂಪದವೆಲ್ಲವು ಹೆಚ್ಚಿತು
ವ್ಯಾಪಾರದಿ ಗೆಲುವಾಗುತಿರೆ
ಸಣ್ಣ ಹಡಗುಗಳು ಸಾಲದೆ ಹೋಗಲು
ದೊಡ್ಡದು ಕಟ್ಟಿಸೆ ಮನತೋರೆ

ಕೇಳಿ ಮುಹೂರ್ತವ ಜೋಯಿಸರಲ್ಲಿಯೆ
ದಿನ ತಿಥಿಯೆಲ್ಲವು ಶುಭವಿರಲು
ತಾಳುತ ಸಂಭ್ರಮ ಸಂತಸದಲ್ಲಿಯೆ
ನೀರಿಗೆ ಹಡಗವನಿಳಿಸಿರಲು



ಆಹಾ! ಅಚ್ಚರಿ! ಏನದು ಶಬ್ದವು?
ಕೇಳಿದರೆಲ್ಲರು ನಡುನಡುಗಿ
"ಓಹೋ! ನಿಲ್ಲಲಿ ! ನರಬಲಿ ಸಲ್ಲಲಿ !"
ದನಿಯೊಂದೆದ್ದಿತು! ಗುಡುಗುಡುಗಿ!

ಸಿಡಿಲೇ ಹೊಡೆದಂತಾಯಿತು ಪಾಂಡ್ಯಗೆ
ಬಲಿಯನು ಕೊಡುವುದೇ ಯಾರನ್ನು
ನುಡಿಯಿತು ಕುಂಡೋದರವಿದು ಭೂತವು
ಮಾಡುವುದೇನನು ನಾನಿನ್ನು

"ಮಕ್ಕಳು ನಮಗಿಹರೇಳುವರವರಲಿ
ಒಬ್ಬನನಿಂದಿಗೆ ಬಲಿ ಕೊಡುವ
ಹೊಕ್ಕಿಹ ಮಾರಿಯ ತೊಲಗಿಸದಿದ್ದರೆ
ಪೀಡೆಯ ದಿನ  ದಿನ ಕೊಡುವನವ"

"ಅಕಟಾ! ಪಡೆದೀ ಮಕ್ಕಳೊಳೊಬ್ಬನ
ಬಲಿಕೊಡಲೆಂಬೀ ಮನವುಂಟೆ?
ಸಕಲೈಶ್ವರ್ಯವು ಹೋದರು ಹೋಗಲಿ
ಮಗನನು ಕೊಲ್ಲಲು ಕೊಡಲುಂಟೆ?"

ಹೆಂಡತಿಯೀಪರಿ ಖಂಡಿಸಿ ನುಡಿಯಲು
ಗಾಯಕೆ ಗೆರೆಯೆಳೆದಂತಾಯ್ತು!
ಪಾಂಡ್ಯನು ದುಃಖದಿ ಹಾಸಿಗೆ ಹಿಡಿದನು
ಸುದ್ದಿಯು ಮನೆಮನೆ ಹರಡಿತ್ತು

ದೇವಪಾಂಡ್ಯ ಸೋದರಿಗೀವಾರ್ತೆಯು
ಮುಟ್ಟಿತು ತನ್ನಣ್ಣನ  ಚಿಂತೆ
ನಯವತಿ - ಸತ್ಯವತಿಯು ಪತಿಸುತರೊಡ-
ಗೂಡುತ ಬಂದಳು ಗುಣವಂತೆ

ಏಳೆನ್ನಗ್ರಜ ನೀನಿದಕೀಪರಿ
ಮರುಗಲು ಬೇಕೇ ಬಿಡು ಚಿಂತೆ
ಕೇಳೆನ್ನಯ ಮಗನನು ನಾನೀವೆನು
ಭೂತಕೆ ನರಬಲಿ ಸಲುವಂತೆ

ಸವಿಜೇನಿನ ಮಳೆ ಸುರಿದಂತಾಯಿತು
ತಂಗಿಯ ನುಡಿಗಳಿವನು ಕೇಳಿ!
ಬುವಿಯಲಿ ನಮ್ಮೊಡಹುಟ್ಟುಗಳಲ್ಲವೆ
ಕಷ್ಟಕೊದಗುವರು ನಿತ್ಯದಲಿ?

"ನನ್ನೀ ಕಾರ್ಯಕೆ ನನ್ನಯ ಸುತರನೆ
ಕೈಹಿಡಿದಾಕೆಯು ಕೊಡಲಿಲ್ಲ
ನಿನ್ನೊಬ್ಬನೆ ಮಗನಿವನನು ನೀಡುವೆ !
ಭಾವ ಕೋಪಿಸನೆ? ಇದು ಸಲ್ಲ!"

"ನಮ್ಮೊಳು ಭೇದಗಳಿತ್ತೇ ಸುಖದಲಿ
ದುಃಖದಿ ತೊಲಗುವೆವೇ ಹೇಳು
ಸಮ್ಮತಿ ಪಡೆದೇ  ಬಂದಿಹೆ ಸೋದರ
ಉಮ್ಮಳವನು ಬಿಡು ಬೇಗೇಳು"

ಸತ್ಯವತಿಯು ತನ್ನಯ ಸುತ ಜಯನನು
ಮೀಯಿಸಿ ತಂದಳು ಶುಚಿಯಾಗಿ
ಸತ್ಯಾತ್ಮನು ಕಾಪಾಡಲಿ ಕಂದನ !
ಎನ್ನುತ ಕೊಟ್ಟಳು ಬಲಿಗಾಗಿ!

ಬಂದಿತು ನಾಡಿನ ಸಂದಣಿ ಜನರದು
ನರಬಲಿಯಲ್ಲವೆ ನೋಡಲಿಕೆ!
ತಂದು ಕಠಾರಿಯನೊಂದನು ಪಾಂಡ್ಯನು
ಎತ್ತಿದನಳಿಯನ ಕುತ್ತಿಗೆಗೆ!

ನಿಲ್ಲೈ! ನಿಲ್ಲೈ! ಕೊಲದಿರು ಪಾಂಡ್ಯನೆ
ಬಲಿಯಿದು ಬಂದಂತೆನಗಾಯ್ತು !
ಎಲ್ಲಾ ನಿನ್ನಯ ಸಂಪದವಳಿಯಗೆ
ಸಲ್ಲಿಸೆನುತ ನುಡಿ ಬಯಲಾಯ್ತು!

ಕುಂಡೋದರನೆಂದೀ ನುಡಿ ಕೇಳುತ
ನಲಿದರು ಹರ್ಷದಿ ಜನರಂದು
ಪಾಂಡ್ಯನು ಬರೆದನು ಪ್ರೀತಿಗೆ ಮೆಚ್ಚುತ
ಸೋದರಿ ಸುತನಿಗೆ ಸೊತ್ತೆಂದು

ಅಳಿಯನು ಮಾವನ ಮರಣದಿ ಪಡೆದನು
ಮನೆ ಹಣ ಬದುಕುಗಳೆಲ್ಲವನು;
ಗಳಿಸಿದ ವ್ಯಾಪಾರವ ನಡೆಸುತಲವ
ಧನ ಜನ ಗುಣವನು -ಕೀರ್ತಿಯನು!

ಅಳಿಯನು ಮಾವನ ಸೊತ್ತನು ಪಡೆದಾ
ಕಥೆಯನು ಪ್ರಜೆಗಳು ಕೇಳಿದರು
ತಿಳಿದರು ಸತ್ಯವ ,ಪ್ರೀತಿಯ ತತ್ವವ
ಅಳಿಯ ಕಟ್ಟಿನೊಳೆ ಬಾಳಿದರು

**- ಕಯ್ಯಾರ ಕಿಞ್ಞಣ್ಣ ರೈ**

## ಕವಿ ಪರಿಚಯ



ಕಯ್ಯಾರ ಕಿಞ್ಞಣ್ಣ ರೈ ಅವರು ಕಲ್ಲಕ್ಕಳಿಯ ದುಗ್ಗಪ್ಪ ರೈ ಮತ್ತು ಕಯ್ಯಾರ ದೆಯ್ಯಕ್ಕೆ ದಂಪತಿಗಳ ಮಗನಾಗಿ 1915 ಜೂನ್ 8 ರಂದು ಪೆರಡಾಲದಲ್ಲಿ ಜನಿಸಿದರು. ನವಜೀವನ ಹೈಸ್ಕೂಲು ಪೆರಡಾಲದಲ್ಲಿ ಅಧ್ಯಾಪಕರಾಗಿದ್ದ ಇವರು ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಶತಮಾನದ ಗಾನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. 'ದುಡಿತವೇ ನನ್ನದೇವರು' ಇವರ ಆತ್ಮಕಥನ. 1969 ರಲ್ಲಿ ಭಾರತ ಸರಕಾರದಿಂದ ಶ್ರೇಷ್ಠ ಅಧ್ಯಾಪಕ ಪ್ರಶಸ್ತಿ ಪಡೆದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಪ್ರಶಸ್ತಿ ಮೊದಲಾದವುಗಳು ಇವರಿಗೆ ಸಂದ ಇತರ ಗೌರವಗಳು. ಶತಾಯುಷಿ ಕಿಞ್ಞಣ್ಣ ರೈಯವರು 2015 ಆಗಸ್ಟ್ 9 ರಂದು ನಿಧನರಾದರು.

## ಚಟುವಟಿಕೆಗಳು

### ಹಾಡಿರಿ

ಈ ಕಥನ ಕವನವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

1. ದೇವಪಾಂಡ್ಯನು ಯಾವ ದೇಶದ ವರ್ತಕನಾಗಿದ್ದನು?
2. ಹಡಗನ್ನು ನೀರಿಗೆ ಇಳಿಸುವಾಗ ಏನಾಯ್ತು?
3. ದೇವಪಾಂಡ್ಯನು ಹಾಸಿಗೆ ಹಿಡಿದ ವಾರ್ತೆಯನ್ನು ತಿಳಿದ ಸಹೋದರಿ ಏನು ಮಾಡಿದಳು?
4. ಅಳಿಯನನ್ನು ಬಲಿಕೊಡಲು ದೇವಪಾಂಡ್ಯನು ಕಠಾರಿಯನ್ನು ಎತ್ತಿದಾಗ ಏನು ಸಂಭವಿಸಿತು?

### ಊಹಿಸಿ ಬರೆಯಿರಿ

ದೇವಪಾಂಡ್ಯನ ಸಹೋದರಿ ಸತ್ಯವತಿಯು ತನ್ನ ಮಗನನ್ನು ಬಲಿಕೊಡಲು ಒಪ್ಪದಿರುತ್ತಿದ್ದರೆ ಪರಿಣಾಮ ಏನಾಗುತ್ತಿತ್ತು? ಊಹಿಸಿ ಬರೆಯಿರಿ.

ST-495-2-KANNADA(BT)5

## ಟಿಪ್ಪಣಿ ಬರೆಯಿರಿ

**ಪಾಂಡ್ಯನು ಬರೆದನು ಪ್ರೀತಿಗೆ ಮೆಚ್ಚುತ**

**ಸೋದರಿಸುತನಿಗೆ ಸೊತ್ತೆಂದು**

ಮೇಲಿನ ಸಾಲುಗಳ ಹಿನ್ನೆಲೆಯಲ್ಲಿ ತುಳುನಾಡಿನ 'ಅಳಿಯ ಕಟ್ಟು' ಮತ್ತು ಅಣ್ಣ-ತಂಗಿಯರ ಪ್ರೀತಿ ವಾತ್ಸಲ್ಯದ ಕುರಿತು ಒಂದು ಟಿಪ್ಪಣಿಯನ್ನು ಅದು ನೀಡುವ ಸಂದೇಶದೊಂದಿಗೆ ಬರೆಯಿರಿ.

## ಅಭಿಪ್ರಾಯ ಬರವಣಿಗೆ

ಆಹಾ! ಅಚ್ಚರಿ! ಏನದು ಶಬ್ದವು?
ಕೇಳಿದರೆಲ್ಲರು ನಡುನಡುಗಿ
ಓಹೋ! ನಿಲ್ಲಲಿ! ನರಬಲಿ ಸಲ್ಲಲಿ!
ದನಿಯೊಂದೆದ್ದಿತು ಗುಡುಗುಡುಗಿ

ನರಬಲಿ, ಪ್ರಾಣಿ ಬಲಿ ಕೊಡುವುದು ಹಿಂಸೆಯಲ್ಲವೇ

ಈ ಮಾತಿನ ಹಿನ್ನೆಲೆಯಲ್ಲಿ ಈ ಜನಪದ ಕಥಾನಕದಲ್ಲಿ ಬರುವ ಹಿಂಸೆಯನ್ನು ಖಂಡಿಸಿ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

## ಸಂಭಾಷಣೆ ರಚಿಸಿರಿ

ದೇವಪಾಂಡ್ಯನ ಸಹೋದರಿಯು ಮಗನನ್ನು ಬಲಿಕೊಡಲು ನಿರ್ಧರಿಸಿ ಅಣ್ಣನ ಬಳಿಗೆ ಬಂದಳು. ಆಗ ಅವರಿಬ್ಬರ ನಡುವೆ ನಡೆದ ಸಂಭಾಷಣೆಯನ್ನು ಕಥನ ಕವನದ ಆಧಾರದಲ್ಲಿ ಬರೆದು ಅಭಿನಯಿಸಿರಿ.

ಸತ್ಯವತಿ : ಅಣ್ಣಾ... ಯಾಕೆ ಚಿಂತಿಸುತ್ತಿದ್ದೀರಿ?

ದೇವಪಾಂಡ್ಯ : ..............................

## ಕಥೆ ಬರೆಯಿರಿ

ಭೂತಾಳ ಪಾಂಡ್ಯ ಕಥನ ಕವನವನ್ನು ಕಥಾರೂಪದಲ್ಲಿ ಬರೆಯಿರಿ.

## ವಿವರಣೆ ಬರೆಯಿರಿ

ತುಳುನಾಡಿನ ಜನಪದ ಕ್ರೀಡೆಯಾದ 'ಕಂಬಳ'ದ ಕುರಿತು ವಿವರಣೆ ಬರೆಯಿರಿ.

## ಪ್ರಾಸ ಪದಗಳು

ಕಂದ - ಚಂದ

ಸಿರಿವಂತ - ಗುಣವಂತ

ಮೇಲಿನ ಪದಗಳನ್ನು ಗಮನಿಸಿದಿರಲ್ಲವೇ. ಈ ರೀತಿಯ ಪದಗಳನ್ನು ಪ್ರಾಸ ಪದಗಳು ಎನ್ನುತ್ತಾರೆ.

ಕಥನ ಕವನದಲ್ಲಿ ಬಂದ ಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.

## ಮಾದರಿಯಂತೆ ಬರೆಯಿರಿ

1. ವರ್ತಕನು + ಇದ್ದನು - ವರ್ತಕನಿದ್ದನು
2. ತೊಲಗಿಸದೆ + ಇದ್ದರೆ -
3. ಕಥೆ + ಒಂದು -
4. ಬಂದಂತೆ + ಎನಗೆ + ಆಯಿತು -
5. ಹೇಳು + ಎನ್ನ + ಅಗ್ರಜ -

# ಜಟ್ಟಿಯ ಫಜೀತಿ

ರಾಜರ ಆಳ್ವಿಕೆಯ ಕಾಲವದು. ಅರಮನೆಯೆಂದರೆ ಕೇಳಬೇಕೆ? ಸಕಲ ಕಲಾವಿದರೂ ಅಲ್ಲಿಗೆ ಬರುತ್ತಿದ್ದರು. ಕುಂಬಳೆಯ ರಾಜದರ್ಬಾರುಗಳೆಲ್ಲಾ ಇಂದು ಅಳಿದಿದ್ದರೂ ಹಿಂದೆ ಕುಂಬಳೆ ಅರಸರು ಕಲಾಭಿಜ್ಞರಾಗಿದ್ದರು. ರಸಿಕರಾಗಿದ್ದರು. ಸ್ವತಃ ಕವಿಗಳಾಗಿದ್ದರು. ಜಟ್ಟಿ ಕಾಳಗ, ಕವಿಗೋಷ್ಠಿ, ಯಕ್ಷಗಾನ, ಆಟಕೂಟ ಇವನ್ನು ನಡೆಸಿ ಶ್ರೇಷ್ಠ ಕಲಾವಿದರನ್ನು ಸನ್ಮಾನಿಸುತ್ತಿದ್ದರು. ಕಂಬಳ, ಜಾತ್ರೆ, ನೇಮ ಕೂಡುಕಟ್ಟುಗಳಲ್ಲಿ ಸ್ವತಃ ಭಾಗವಹಿಸಿ ಅಗ್ರಮನ್ನಣೆ ಪಡೆಯುತ್ತಿದ್ದರು. ಅರಸರ ಕೀರ್ತಿ ನಾಲ್ಕು ದಿಕ್ಕುಗಳಲ್ಲೂ ಹಬ್ಬಿತ್ತು. ಸ್ವತ: ಕಲಾವಿದರೂ ಆಗಿದ್ದರು. ಯಾತ್ರಿಕರಿಗೆ ಅರಮನೆ, ಕೂಡಲು ಸಂಪಿಗೆ ಚಾವಡಿ 'ತಂಗುದಾಣ'ಗಳಾಗಿದ್ದವು.

ಒಂದು ದಿನ ಕೊಚ್ಚಿಯ ಜಟ್ಟಿಯೊಬ್ಬನು ಕೂಡಲಿಗಾಗಿ ಅರಮನೆಗೆ ಬಂದನು. ಅರಸರ ಕಾಲಿಗೆರಗಿ ತನ್ನ ಬಿರುದು ಬಾವಲಿಗಳನ್ನು ತೋರಿಸಿ ಅರಮನೆ ಜಟ್ಟಿಗೆ ಕುಸ್ತಿಗೆ



ಆಹ್ವಾನವಿತ್ತನು. ಕಬ್ಬಿಣದ ಎರಕ ಹೊಯ್ದು ಮಾಡಿದಂತಿತ್ತು ಅವನ ಎದೆ ಕಟ್ಟು, ಮೈಕಟ್ಟು! ವೇಷಭೂಷಣ ಭಾಷಣಗಳಿಂದ ಅವನು ಮಲೆಯಾಳಿ ಎಂದು ಗೊತ್ತಾಗುತ್ತಿತ್ತು. ಅವನು ತನ್ನ ಹೆಗ್ಗಳಿಕೆಯನ್ನು ಹೇಳಿ ಕುಸ್ತಿಗೆ ಎಡೆ ಮಾಡಿಕೊಡಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಂಡನು. ಅರಸರು ಒಪ್ಪಿಗೆಯಿತ್ತು ಬಿಡಾರಕೊಟ್ಟು ನಿಲ್ಲಿಸಿಕೊಂಡರು. ಅರಸರಿಗೆ ಯೋಚನೆಗಿಟ್ಟುಕೊಂಡಿತು. "ಜಟ್ಟಿಯ ಆಹ್ವಾನವನ್ನೇನೋ ಸ್ವೀಕರಿಸಿದೆ. ಆದರೆ ಅವನೊಡನೆ ಕುಸ್ತಿಗೆ ನಿಲ್ಲುವವರಾರು?" ಎಂದು ನಿದ್ದೆ ಬಾರದೆ ರಾತ್ರಿಯನ್ನು ನೂಕಿದರು.

ಅರಸರ ಮುಖ ನಿದ್ದೆ ಇಲ್ಲದೆ ಕಂದಿತ್ತು. ಜೋಲು ಮುಖ ಹಾಕಿಕೊಂಡು ಕುಳಿತಿದ್ದರು. ಅವರ ಮುಖದಲ್ಲಿ ಎಂದಿನ ಕಾಂತಿಯಿರಲಿಲ್ಲ. ಆಸ್ಥಾನದವರು ಇದನ್ನು ಕಂಡು ಗಾಬರಿಯಾದರು. ಕೇಳುವ ಧೈರ್ಯ ಯಾರಿಗೂ ಬರದು. ಆದರೆ ಬಾಚ ಧೈರ್ಯವಹಿಸಿ ಕೇಳಿಯೇ ಬಿಟ್ಟ. "ಬುದ್ದಿಯವರು ಎಂದಿನಂತೆ ಈ ದಿನ ಗೆಲುವಾಗಿಲ್ಲದಿರಲು ಕಾರಣವೇನು? ಈ ಸೇವಕನಲ್ಲಿ ಮರೆಮಾಚದೆ ಹೇಳುವ ಕೃಪೆ ಮಾಡಬೇಕು. ಯಾರು ಅವಮಾನ ಮಾಡಿದರು! ಅಪ್ಪಣೆಯಾಗಲಿ. ಅವನನ್ನು ತಂದು ಪ್ರಭುಗಳ ಪಾದದಡಿಯಲ್ಲಿ ಕೆಡಹುವೆನು. ದಯವಿಟ್ಟು ತಿಳಿಸಿರಿ. ನಿಮ್ಮ ಚಿಂತಾಪರಿಹಾರಕ್ಕಾಗಿ ಕೈಲಾದ ಪ್ರಯತ್ನ ಮಾಡುವೆನು. ಧರ್ಮದ ಕೂಳನ್ನು ತಿಂದು ಕೊಬ್ಬಿದ ದೇಹವಿದು. ಅದರಿಂದ ಆಗುವ ಕೆಲಸವಾದರೆ ಮಾಡುವೆನು.ಇಲ್ಲವಾದರೆ ಮಡಿಯುವೆನು. ಏನಾದರೂ ಮಾಡಿ ಪ್ರಭು ಋಣವನ್ನು ತೀರಿಸಿಕೊಳ್ಳುವೆನು" ಎಂದನು ವಿನಯದಿಂದ.

ಅರಸರಿಗೆ ದುಃಖ ಒತ್ತರಿಸಿ ಬಂದು ಗಂಟಲು ಕಟ್ಟಿಹೋಯಿತು. ಬಾಚನ ಆತ್ಮೀಯತೆ ಕಣ್ಣಿನಿಂದ ಬಳಬಳನೆ ನೀರು ಹರಿಯಿಸಿತು. ಬಿಕ್ಕಿ ಬಿಕ್ಕಿ ಅತ್ತರು. ಬಾಚನು ಹಲವು ವಿಧದಿಂದ ಸಮಾಧಾನಗೊಳಿಸಿದನು. ಕೊಚ್ಚಿಯಿಂದ ಬಂದ ಜಟ್ಟಿಯ ಆಹ್ವಾನವನ್ನೂ ತಿಳಿಸಿ ಅವನ ಆಕಾರ ಬಿರುದು ಬಾವಲಿಗಳನ್ನು ಹೇಳಿದರು.ಬಾಚ ಗೊಳ್ಳನೆ ನಕ್ಕು - "ಅಷ್ಟೆಯೋ ಒಡೆಯಾ....! ನಾಳೆಯೆ ಆಗಲಿ .ತಮ್ಮ ಈ ಬಾಚ ಅವನೊಡನೆ ಒಂದು ಕೈ ನೋಡಿಯೇ ತೀರುವನು. ಬುದ್ಧಿ! ಮಧೂರ ಕಂಬಳದಲ್ಲಿ ನಡೆದ ಸಂಗತಿ - ಹುಚ್ಚೆದ್ದು ಓಡಿದ ಕೋಣವನ್ನು ಹಿಡಿದು ನಿಲ್ಲಿಸಿದ್ದ ಕೆಲಸ... ಇವನ್ನು ಮರೆತಿರಾ?..! ಅವನೆಂಥವನೆ ಆಗಲಿ ಪುಡಿಗುಟ್ಟುವೆ. ಶಾಂತಚಿತ್ತರಾಗಿರಿ. ಈಗಲೇ ಕರೆದು ತಮ್ಮ ಉತ್ತರವನ್ನು ತಿಳಿಸಿಬಿಡಿರಿ. ನಾನು ಯಾವಾಗಲೂ ಪ್ರಭು ಸೇವೆಗೆ ಸಿದ್ಧನೆ" ಎಂದು ಕೈ ಮುಗಿದನು.

ಅರಸರಿಗೆ ಸ್ವರ್ಗವೆ ಕೈಗೆಟುಕ್ಕಿದಷ್ಟು ಸಂತೋಷವಾಯಿತು. ಹುಣ್ಣಿಮೆಯಂದು ಅರಮನೆಯ ಜಟ್ಟಿಗೂ ಕೊಚ್ಚಿಯ ಜಟ್ಟಿಗೂ ಕಾಳಗವೆಂದು ಸಾರಲಾಯಿತು. ಅರಸರ ಈ ಅಪ್ಪಣೆಯನ್ನು ಕೇಳಿ ಜಟ್ಟಿಗೆ ಬಹಳ ಸಂತೋಷವಾಯಿತು. ಆಶ್ಚರ್ಯವಾಯಿತು. ಕುಸ್ತಿಯ ಮುನ್ನಾದಿನ ಮಧ್ಯಾಹ್ನ ಅರಮನೆಯಲ್ಲಿ ದೊಡ್ಡ ಸಮಾರಾಧನೆ. ಅರಮನೆ ಜಟ್ಟಿಗೂ ಕೊಚ್ಚಿಯ ಜಟ್ಟಿಗೂ ಪರಸ್ಪರ ಪರಿಚಯ ಮಾಡಿಕೊಡಲಾಯಿತು. ಅಂದು ಔತಣಕ್ಕೆ ಮೂರುಸಾವಿರಾಳು ಪ್ರಮುಖರೂ ನಾಲ್ಕು ಪಡಿಪುರೆ ಗುತ್ತಿನ ಮನೆ, ಅಷ್ಟಗ್ರಾಮಣಿಗಳೂ ಸೇರಿದ್ದರು. ಜಟ್ಟಿಗಳಿಬ್ಬರೂ ಎದುರು ಬದುರಾಗಿ ಊಟಕ್ಕೆ ಕುಳಿತರು. ಬಗೆ ಬಗೆಯ ಪದಾರ್ಥಗಳನ್ನು ಬಡಿಸತೊಡಗಿದರು. ದೇವರ ನೈವೇದ್ಯವೆಂದು 'ಕೊಟ್ಟಿಗೆ' ಬಂದಿತು. ಬೆನ್ನಲ್ಲೇ ಎಣ್ಣೆಯೂ ಬಂದಿತು. ಕೊಚ್ಚಿಯ ಜಟ್ಟಿ ಎಳ್ಳೆಣ್ಣೆ ಬೇಕೆಂದನು. ಆಗ ಪಕ್ಕನೆ ಬಾಚ ಕೊಬ್ಬರಿ ಮತ್ತು ಎಳ್ಳನ್ನು ಕೇಳಿದನು. ಅದೇಕೆಂದು ತಿಳಿಯದೆ ಎಲ್ಲರೂ ಆಶ್ಚರ್ಯ ಕುತೂಹಲಗಳಿಂದ ಬಾಚನ ಮುಖವನ್ನು ನೋಡತೊಡಗಿದರು.ನಾಲ್ಕೈದು ಕೊಬ್ಬರಿ ಒಂದು ಸೇರು ಎಳ್ಳು ಬಂದಿತು. ಬಾಚ ಕೊಬ್ಬರಿಯನ್ನು ಕೈಯಲ್ಲಿ ಹಿಡಿದು ಎರಡು ಕೈಗಳಿಂದಲೂ ಒಂದು ಬಾರಿ ಅಮರಿಸಿದನು "ನಿರಿನಿಟಿಲೆಂದು" ಶಬ್ದ ಮಾಡುತ್ತಾ ಕೊಬ್ಬರಿಯೆಲ್ಲ ಜಜ್ಜಿದಂತಾಗಿ ದಳದಳನೆ ಎಣ್ಣೆ ಸುರಿಯಿತು. ಅದನ್ನು ಕೊಟ್ಟಿಗೆಗೆ ಸುರಿದು ಬಾಚಿ ಬಾಚಿ ತಿಂದನು.



ಊಟಕ್ಕೆ ಕುಳಿತವರೆಲ್ಲ ಗರಬಡಿದವರಂತೆ ಬಾಚನ ಈ ಕೃತಿಯನ್ನು ಕಂಡು ದಂಗಾದರು. ಎದುರು ಕುಳಿತ ಜಟ್ಟಿಗೆ ಅರಮನೆ ಜಟ್ಟಿಯ ಬಲದರಿವಾಗಿ ತುತ್ತು ಗಂಟಲಲ್ಲಿ ಇಳಿಯದಾಯಿತು." ಕೊಬ್ಬರಿ ಎಳ್ಳನ್ನು ಕೈಯಿಂದಲೆ ಹಿಂಡಿ ಎಣ್ಣೆ ತೆಗೆದ ಮೇಲೆ ನನ್ನನ್ನು ಈತನು ಉಳಿಸನು! ಎಂದು ಮನಸ್ಸಿನಲ್ಲೆ ಅಂದುಕೊಂಡನು. ಊಟ ತೀರಿಸಿ ಮೇಲೆದ್ದನು. ನಡುಗುತ್ತಾ ಬಿಡಾರವನ್ನು ಸೇರಿಕೊಂಡನು. ಅಂದಿನ ರಾತ್ರಿ ಆತನಿಗೆ ನಿದ್ರೆ ಬರಲಿಲ್ಲ. ಮಧ್ಯರಾತ್ರಿಯಲ್ಲಿ "ಕಾಳಗದಲ್ಲಿ ತಾನು ಇದಿರಾಳಿ ಜಟ್ಟಿಯ ಪೆಟ್ಟಿಗೆ ಮುದ್ದೆಯಾಗಿ ಬಿದ್ದು, ನರಳಿದಂತೆ" ಸ್ವಪ್ನವನ್ನು ಕಂಡನು. ಹೆದರಿ ಎಚ್ಚೆತ್ತು 'ಇದಕ್ಕೆ ಪಲಾಯನವೊಂದೇ ದಾರಿ' ಎಂದು ಕಾಲಿಗೆ ಬುದ್ಧಿ ಹೇಳಿದನು.

ನಿಶ್ಚಿತವಾದಂತೆ ಮರುದಿನ ಕಾಳಗದ ಕಳದ ಸುತ್ತ ಜನ ನೆರೆಯಿತು. ಬಾಚ ದಟ್ಟಿಯುಟ್ಟು ಕಚ್ಚೆ ಹಾಕಿ ಸಿದ್ಧನಾಗಿದ್ದನು. ಎದುರಾಳಿ ಜಟ್ಟಿ ಇನ್ನೂ ಬಂದಿರಲಿಲ್ಲ. ಜನ ಅವನಿಗಾಗಿ ಕಾದರು. ದೂತರು ಬಂದು ಅವನೆಲ್ಲೂ ಕಾಣುವುದಿಲ್ಲ ಎಂದರು. ಅವನ ಬಿಡಾರ ಖಾಲಿಯಾಗಿತ್ತು. ಜನರೆಲ್ಲ ಗೊಳ್ಳೆಂದು ನಕ್ಕರು.

**- ಬೇಕಲ ರಾಮ ನಾಯಕ**

### ಲೇಖಕರ ಪರಿಚಯ



ಬೇಕಲ ರಾಮ ನಾಯಕರು 1902 ಅಕ್ಟೋಬರ್ 26 ರಂದು ಕಾಸರಗೋಡಿನ ಬೇಕಲದಲ್ಲಿ ಜನಿಸಿದರು. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಇವರು ಪುಳ್ಕೂರು ಬಾಚ, ನಾಡಕತೆಗಳು, ತೆಂಕನಾಡ ಐತಿಹ್ಯಗಳು, ಕೆಚ್ಚಿನ ಕಿಡಿಗಳು, ಸತ್ಯಪರೀಕ್ಷೆ, ಬಾಳಿದ ಹೆಸರು ಮತ್ತು ಇತರ ಐತಿಹ್ಯಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಕಥನ ಕವನ, ನಾಟಕ ಮುಂತಾದವುಗಳನ್ನೂ ರಚಿಸಿದ್ದಾರೆ. ಕನ್ನಡ ನಾಡು - ನುಡಿಯ ರಕ್ಷಣೆಗಾಗಿ ಅವಿಶ್ರಾಂತವಾಗಿ ದುಡಿದ ಈ ಚೇತನ 21-11-1969 ರಂದು ಇಹಲೋಕದಿಂದ ಕಣ್ಮರೆಯಾಯಿತು. ಪ್ರಸ್ತುತ ಪಾಠಭಾಗವನ್ನು ಶ್ರೀಯುತರ 'ಪುಳ್ಕೂರು ಬಾಚ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರ ಬರೆಯಿರಿ

1. ಅರಸನಿಗೆ ನಿದ್ದೆ ಬಾರದಿರಲು ಕಾರಣವೇನು?
2. ಅರಸರ ಚಿಂತೆಯನ್ನು ನೋಡಿ ಬಾಚ ನುಡಿದುದೇನು?
3. "ಅರಸರಿಗೆ ಸ್ವರ್ಗವೇ ಕೈಗೆಟುಕಿದಷ್ಟು ಸಂತೋಷವಾಯಿತು" ಯಾಕೆ?
4. ಕೊಚ್ಚಿಯ ಜಟ್ಟಿಯು "ಪಲಾಯನವೊಂದೆ ದಾರಿ" ಎಂದು ಓಡಿಹೋಗಲು ಕಾರಣವೇನು?

### ಪಾತ್ರ ಚಿತ್ರಣ ಬರೆಯಿರಿ

'ಜಟ್ಟಿಯ ಫಜೀತಿ' ಕಥೆಯಲ್ಲಿ ಬರುವ 'ಪುಳ್ಕೂರು ಬಾಚ'ನ ಪಾತ್ರ ಚಿತ್ರಣ ಬರೆಯಿರಿ.

### ಲೇಖನ ಬರೆಯಿರಿ

ನಮ್ಮ ಊರಿನಲ್ಲಿ ಹಲವಾರು ಜನಪದ ಕ್ರೀಡೆಗಳು ಪ್ರಚಲಿತದಲ್ಲಿವೆ. (ಉದಾ: ಲಗೋರಿ, ಕುಟ್ಟಿದೊಣ್ಣೆ, ಜಿಬಿಲಿ) ನಿಮಗೆ ಇಷ್ಟವಿರುವ ಯಾವುದಾದರೂ ಒಂದು ಕ್ರೀಡೆಯ ಕುರಿತು ಲೇಖನ ಬರೆಯಿರಿ.

### ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದಗಳ ವಿರೋಧ ಪದಗಳನ್ನು ಉಪಯೋಗಿಸಿ ವಾಕ್ಯ ರಚಿಸಿರಿ.

- ಅರಸರಿಗೆ ದುಃಖ ಒತ್ತರಿಸಿ ಬಂದು ಗಂಟಲು ಕಟ್ಟಿತು.
- ಕೇಳುವ ಧೈರ್ಯ ಯಾರಿಗೂ ಬಾರದು.
- ಅರಸರ ಕೀರ್ತಿ ನಾಲ್ಕು ದಿಕ್ಕುಗಳಲ್ಲಿಯೂ ಹಬ್ಬಿತ್ತು.

## ಪದ ಹುಡುಕಿರಿ

ಕೆಳಗೆ ಕೊಟ್ಟಿರುವ ಪದಗಳನ್ನು ಗಮನಿಸಿರಿ.

ದಳ ದಳನೆ

ಬಾಚಿ ಬಾಚಿ

ಒಂದೇ ಪದವು ಎರಡು ಬಾರಿ ಬಂದಿವೆಯಲ್ಲಾ?

ಪಾಠಭಾಗದಲ್ಲಿ ಬಂದ ಈ ರೀತಿಯ ಪದಗಳನ್ನು ಹುಡುಕಿ ಬರೆಯಿರಿ.

## ಓದಿ ತಿಳಿಯಿರಿ

### ವರ್ಣಮಾಲೆ

| | | |
|---|---|---|
| **ಸ್ವರಾಕ್ಷರಗಳು** | : | ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ |
| **ಯೋಗವಾಹಗಳು** | : | ಅಂ ಅಃ |
| **ವರ್ಗೀಯ ವ್ಯಂಜನಾಕ್ಷರಗಳು** | : | ಕ ಖ ಗ ಘ ಙ |
| | | ಚ ಛ ಜ ಝ ಞ |
| | | ಟ ಠ ಡ ಢ ಣ |
| | | ತ ಥ ದ ಧ ನ |
| | | ಪ ಫ ಬ ಭ ಮ |
| **ಅವರ್ಗೀಯ ವ್ಯಂಜನಾಕ್ಷರಗಳು** | : | ಯ ರ ಲ ವ ಶ ಷ ಸ ಹ ಳ |

## ಸಂಗ್ರಹಿಸಿರಿ

ತುಳುನಾಡಿನ ವೀರರ ಕಥೆಗಳನ್ನು ಸಂಗ್ರಹಿಸಿ ಬರೆಯಿರಿ.

# 2. ಸೌಖ್ಯ ಸಂಜೀವಿನಿ



## ಪ್ರವೇಶ ಚಟುವಟಿಕೆ





ಈ ಮೇಲಿನ ಚಿತ್ರಗಳನ್ನು ಗಮನಿಸಿ ನಿಮ್ಮ ಅಭಿಪ್ರಾಯಗಳನ್ನು ಗುಂಪಿನಲ್ಲಿ ಚರ್ಚಿಸಿ, ತರಗತಿಯಲ್ಲಿ ಮಂಡಿಸಿರಿ.

# ಹೊಟ್ಟೆಬಾಕ ಶಿಷ್ಯ

ಒಂದು ಊರಿನಲ್ಲಿ ಆಶಾನಂದ ಎಂಬ ಹುಡುಗನಿದ್ದನು. ಅವನಿಗೆ ತಂದೆ ತಾಯಂದಿರು ಯಾರೂ ಇರಲಿಲ್ಲ. ಅಲ್ಲಿ ಇಲ್ಲಿ ಭಿಕ್ಷೆ ಬೇಡಿ ಜೀವಿಸುತ್ತಿದ್ದನು. ಒಂದು ದಿನ ಒಬ್ಬ ಸಾಧುಗಳು ಅವನನ್ನು ನೋಡಿದರು. ಅವನ ಅವಸ್ಥೆಯನ್ನು ಕಂಡು ಮರುಗಿದರು. ತಾವು ಒಬ್ಬರೇ ಇರುವುದರಿಂದ ಮುಪ್ಪಿನಲ್ಲಿ ತಮ್ಮನ್ನು ನೋಡಿಕೊಳ್ಳಲು ಒಬ್ಬ ರಕ್ಷಕ ಸಿಕ್ಕಿದಂತಾಯಿತೆಂದು ಅವನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋದರು.

ಆ ಸಾಧುಗಳ ಹೆಸರು ಬ್ರಹ್ಮಾನಂದ. ಅವರು ಆ ಊರಿನಲ್ಲಿ ಜನಗಳಿಗೆ ನಾರು ಬೇರುಗಳ ಔಷಧಿಯನ್ನು ಕೊಟ್ಟು ಪ್ರಖ್ಯಾತರಾಗಿದ್ದರು. ಅವರು ಕೊಡುವ ಔಷಧಿಗಳು ಕೂಡಲೇ ಕಾಯಿಲೆಯನ್ನು ವಾಸಿ ಮಾಡುತ್ತಿತ್ತು. ಅದರಿಂದ ಜನ ಸಂತೃಪ್ತಿಗೊಂಡು ಅವರ ಆಶ್ರಮಕ್ಕೆ ಹಾಲು, ಮೊಸರು, ದವಸ ಧಾನ್ಯ ಮೊದಲಾದ ಎಲ್ಲಾ ನಿತ್ಯೋಪಯುಕ್ತ ವಸ್ತುಗಳನ್ನು ತಂದು ಕೊಡುತ್ತಿದ್ದರು. ಅದರಿಂದ ಸಾಧುಗಳ ದಿನನಿತ್ಯದ ಜೀವನ ಯಾವ ಕಷ್ಟವೂ ಇಲ್ಲದೆ ಸಾಗುತ್ತಿತ್ತು.

ಆಶಾನಂದನು ಹೆಸರಿಗೆ ತಕ್ಕಂತೆ ತುಂಬಾ ಆಸೆಬುರುಕನಾಗಿದ್ದನು. ಆಶ್ರಮದಲ್ಲಿ ತಯಾರಿಸಿದ ಆಹಾರದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಗುರುಗಳಿಗೆ ಬಡಿಸಿ ಉಳಿದುದನ್ನು ತಾನೇ ತಿನ್ನುತ್ತಿದ್ದನು. ಗುರುಗಳು "ಪಾಪ.... ಬಡ ಹುಡುಗ.... ಊಟ ಮಾಡಿ ಎಷ್ಟು



ದಿನವಾಯಿತೋ?" ಎಂದು ತಾವು ಸ್ವಲ್ಪವೇ ಉಂಡರೂ ಅಷ್ಟರಿಂದಲೇ ತೃಪ್ತಿ ಪಡುತ್ತಿದ್ದರು. ಆಶಾನಂದನ ಹೊಟ್ಟೆಬಾಕತನ ದಿನದಿಂದ ದಿನಕ್ಕೆ ಹೆಚ್ಚತೊಡಗಿತು. ಬರಬರುತ್ತಾ ಗುರುಗಳ ಯೋಗಕ್ಷೇಮವನ್ನು ಕಡೆಗಣಿಸಿದನು. ಅಷ್ಟು ಸಾಲದು ಎಂಬಂತೆ ಊರವರಿಂದ ಅದೂ ಇದೂ ಕೇಳಿ ಪಡೆದು ತಿನ್ನುತ್ತಿದ್ದನು. ಆದರೂ ಗುರುಗಳು ಅವನಿಗೆ ಏನೂ ಹೇಳದೆ ಅವನನ್ನು ಆಶ್ರಮದಲ್ಲಿ ಇಟ್ಟುಕೊಂಡರು.

ಗುರುಗಳಿಗೆ ಯಾರೂ ದಿಕ್ಕು ಇಲ್ಲ. ಅವರನ್ನು ನೋಡಿಕೊಳ್ಳಲು ಒಬ್ಬರು ಬೇಕು, ತಾನು ಏನೇ ಮಾಡಿದರೂ ಅವರು ಸಹಿಸಿಕೊಳ್ಳುತ್ತಾರೆ ಎಂದುಕೊಂಡ ಆಶಾನಂದ ತಿಂದು ತಿಂದು ಅವನ ದೇಹದಲ್ಲಿ ಅಧಿಕವಾಗಿ ಕೊಬ್ಬು ಶೇಖರವಾಯಿತು. ದಿನದಿಂದ ದಿನಕ್ಕೆ ತುಂಬಾ ದಪ್ಪವಾಗತೊಡಗಿದ. ಕಡೆ ಕಡೆಗೆ ನಡೆಯಲು ಅವನಿಂದ ಸಾಧ್ಯವಿಲ್ಲವಾಯಿತು. ಕುಳಿತಲ್ಲೇ ಕುಳಿತು ತಿನ್ನುವುದನ್ನು, ಉಣ್ಣುವುದನ್ನು ಮಾಡುತ್ತಿದ್ದ. ಕ್ರಮೇಣ ಅವನಿಗೆ ಉಸಿರಾಡಲು ಕಷ್ಟವಾಯಿತು. ತನಗೆ ಏನೋ ಕಾಯಿಲೆ ಬಂದಿರಬೇಕೆಂದುಕೊಂಡು "ಗುರುಗಳೇ, ನನಗೆ ಏನೋ ರೋಗ ಬಂದಿದೆ. ದಯವಿಟ್ಟು ಏನಾದರೂ ಔಷಧಿಯನ್ನು ಕೊಡಿ'' ಎಂದು ಬೇಡಿಕೊಂಡ. ಗುರುಗಳು ಅವನ ನಾಡಿ ಪರೀಕ್ಷೆ ಮಾಡಿ "ನಿನಗೆ ಏನೂ ಔಷಧಿಯನ್ನು ಕೊಡುವುದಿಲ್ಲ. ಗುಣಪಡಿಸಲಾಗದ ರೋಗ ನಿನಗೆ ಬಂದಿದೆ. ನೀನು ಇನ್ನು ಒಂದು ತಿಂಗಳು ಮಾತ್ರ ಬದುಕುವುದು. ನಿನಗೆ ಇಷ್ಟವಾದುದನ್ನೆಲ್ಲ ತಿಂದುಕೊಂಡು



ST-495-3-KANNADA(BT)5

ಹಾಯಾಗಿ ಕಾಲ ಕಳೆ” ಎಂದರು. ಶಿಷ್ಯನಿಗೆ ಭಯವಾಯಿತು. ಅತಿಯಾಗಿ ತಿನ್ನುವುದನ್ನು ನಿಲ್ಲಿಸಿದನು. ಅಷ್ಟೋ ಇಷ್ಟೋ ಗಂಜಿಯನ್ನು ಕುಡಿಯುತ್ತಾ ದಿನವನ್ನು ಎಣಿಸತೊಡಗಿದನು. ಅವನಲ್ಲಿದ್ದ ಕೊಬ್ಬು ಕರಗಿತು. ಕಡೆಗೆ ಗುರುಗಳು ಹೇಳಿದ ಆ ಒಂದು ತಿಂಗಳ ಅವಧಿ ಪೂರ್ತಿಯಾಯಿತು. ಆ ದಿನ ತಾನು ಸಾಯುತ್ತೇನೆಂದು ಕೊಂಡು ದೇವರ ನಾಮವನ್ನು ಪಠಿಸುತ್ತಾ, ಸಾವಿನ ಆಗಮನವನ್ನು ಎದುರು ನೋಡತೊಡಗಿದನು.

ಆಗ ಅಲ್ಲಿಗೆ ಗುರುಗಳು ಬಂದರು. ಅವರನ್ನು ನೋಡಿ ಅಳುತ್ತಾ, ಅವರ ಕಾಲಿಗೆರಗಿದನು. ಆಗ ಗುರುಗಳು, "ಆಶಾನಂದ ಯಾಕೆ ಅಳುತ್ತಿರುವೆ?" ಎಂದು ಅವನ ತಲೆ ನೇವರಿಸುತ್ತಾ ಕೇಳಿದರು. ಆಗ ಶಿಷ್ಯ, "ಗುರುಗಳೇ ನೀವು ಹೇಳಿದಂತೆ ಇಂದು ನಾನು ಸಾಯುವ ದಿನ. ಈ ದಿನ ನಾನು ಅಳಲೇ, ನಗಲೇ?" ಎಂದು ಅಸಹಾಯಕನಾಗಿ ಕೇಳಿದನು. ಅದಕ್ಕೆ ಗುರುಗಳು, "ನೀನು ನಗಬೇಕು. ಏಕೆಂದರೆ ನಿನ್ನನ್ನು ಆವರಿಸಿಕೊಂಡಿರುವ ಅತಿಯಾಗಿ ತಿನ್ನುವ ಬಯಕೆ ದೂರ ಹೋಯಿತು. ಆದುದರಿಂದ ನೀನು ಈಗ ಮೊದಲಿನಂತೆ ಆರೋಗ್ಯವಂತನಾಗಿರುವೆ. ಇನ್ನು ಮುಂದೆ ಮೈಬಗ್ಗಿಸಿ ಕೆಲಸ ಕಾರ್ಯಗಳನ್ನು ಮಾಡುತ್ತಾ, ನಾಲ್ಕು ಜನರಿಗೆ ಉಪಕಾರಿಯಾಗಿ ಬದುಕು" ಎಂದರು. ಆಗ ಆಶಾನಂದರಿಗೆ ತನ್ನ ತಪ್ಪಿನ ಅರಿವಾಯಿತು. ತನ್ನ ಕಣ್ಣು ತೆರೆಸಿದ ಗುರುಗಳ ಪಾದಗಳ ಮೇಲೆ ಹೊರಳುತ್ತಾ "ಗುರುಗಳೇ, ಅನಾಥನಾಗಿದ್ದ ನನ್ನನ್ನು ಕರೆದುಕೊಂಡು ಬಂದು ಆಶ್ರಯ ಕೊಟ್ಟಿರಿ. ಆದರೆ ನಾನು ನಿಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳದೆ ಬರೀ ನನ್ನ ಯೋಗಕ್ಷೇಮವನ್ನು ಮಾತ್ರ ನೋಡಿಕೊಂಡೆನು. ಆದರೂ ಕರುಣಾಮಯಿಗಳಾದ ನೀವು ಏನೂ ಹೇಳಲಿಲ್ಲ. ನಾನು ಹೀಗೆ ಮುಂದುವರೆದಿದ್ದರೆ ಸತ್ತೇ ಹೋಗುತ್ತಿದ್ದೆನೋ ಏನೋ. ಆದರೆ ನೀವು, ನಾನು ಸಾಯುತ್ತೇನೆ ಎಂದು ಹೆದರಿಸಿ ಮತ್ತೆ ಬದುಕನ್ನು ಕೊಟ್ಟಿರಿ. ಇನ್ನು ಮುಂದೆ ನೀವು ಹೇಳಿದಂತೆ ಕೇಳಿಕೊಂಡು ಜನಸೇವೆಯನ್ನು ಮಾಡುತ್ತೇನೆ. ನನ್ನನ್ನು ನಂಬಿ..." ಎಂದು ಹೇಳಿ ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟನು.

ಗುರುಗಳು ತಮಗೆ ತಿಳಿದ ನಾರು ಬೇರುಗಳ ಔಷಧಿಗಳನ್ನು ಅವನಿಗೆ ಹೇಳಿಕೊಟ್ಟರು. ಅವನು ಅದನ್ನು ಶ್ರದ್ಧೆಯಿಂದ ಕಲಿತು ಗುರುಗಳಂತೆ ಊರವರ ಸೇವೆ ಮಾಡತೊಡಗಿದನು. ಊರವರು ಅವನ ಗುರುಗಳನ್ನು ಪ್ರೀತಿಸುವಂತೆ ಅವನನ್ನು ಪ್ರೀತಿಸತೊಡಗಿದರು. ಗುರುಗಳ ಆಸೆಯಂತೆ ಆಶಾನಂದ ಅವರ ಮುಪ್ಪಿನ ಕಾಲದಲ್ಲಿ ಆಶಾದೀಪವಾದನು.

**- ಚಂದ್ರಶೇಖರ ಹೇರ್ಳೆ**

## ಚಟುವಟಿಕೆಗಳು

### ಉತ್ತರಿಸಿರಿ

- ಆಶಾನಂದನ ಗುರುಗಳು ಯಾರು?
- ಆಶಾನಂದನು ಕಾಯಿಲೆ ಬೀಳಲು ಕಾರಣವೇನು?
- ಆಶಾನಂದನನ್ನು ಸರಿದಾರಿಗೆ ತರಲು ಗುರುಗಳು ಹೂಡಿದ ಉಪಾಯವೇನು?

### ಕ್ರಮೀಕರಿಸಿ ಬರೆಯಿರಿ

ಕತೆಯಲ್ಲಿ ಬಂದಿರುವ ಘಟನೆಗಳನ್ನು ಇಲ್ಲಿ ನೀಡಲಾಗಿದೆ. ಅವುಗಳನ್ನು ಕ್ರಮೀಕರಿಸಿ ಬರೆಯಿರಿ.

- ಆಶಾನಂದನು ಕಾಯಿಲೆ ಬಿದ್ದಾಗ ಗುರುಗಳಲ್ಲಿ ಔಷಧಿಯನ್ನು ಕೇಳಿದನು.
- ಅನಾಥನಾದ ಆಶಾನಂದನಿಗೆ ಗುರುಗಳಾದ ಬ್ರಹ್ಮಾನಂದರು ಆಶ್ರಯವಿತ್ತರು.
- ಗುರುಗಳು ಆಶಾನಂದರನ್ನು ಆಲಸ್ಯ ಬಿಟ್ಟು ಕೆಲಸ ಮಾಡಿ ಪರೋಪಕಾರಿಯಾಗಿ ಬಾಳಲು ತಿಳಿಸಿದರು.
- ತಾನು ಸಾಯುತ್ತೇನೆಂದು ತಿಳಿದ ಆಶಾನಂದ ಹಿತಮಿತವಾಗಿ ಆಹಾರ ಸೇವನೆ ಮಾಡಿರುವುದರಿಂದ ಆರೋಗ್ಯವಂತನಾದನು.
- ಗುರೂಪದೇಶದಂತೆ ಆಶಾನಂದ ಎಲ್ಲರಿಗೂ ಬೇಕಾದವನಾಗಿ ಬಾಳತೊಡಗಿದನು.
- ಗುರುಗಳು ಆಶಾನಂದನನ್ನು ಪರೀಕ್ಷಿಸಿ ಸಾವು ಸಮೀಪಿಸುತ್ತಿರುವುದರಿಂದ ಬೇಕಾದಷ್ಟು ತಿನ್ನಲು ಹೇಳಿದರು.
- ಆಶಾನಂದ ಮಿತಿಮೀರಿ ಆಹಾರ ಸೇವಿಸಿದುದರಿಂದ ಕೊಬ್ಬು ತುಂಬಿಕೊಂಡಿತು.

### ಘೋಷಣ ವಾಕ್ಯ ಬರೆಯಿರಿ

ಮಾದರಿಯಂತೆ ಆರೋಗ್ಯಕ್ಕೆ ಸಂಬಂಧಿಸಿದ ಘೋಷಣ ವಾಕ್ಯಗಳನ್ನು ಬರೆಯಿರಿ.

**ಹಿತಮಿತವಾಗಿ ತಿನ್ನಿರಿ. ಆರೋಗ್ಯವನ್ನು ಕಾಪಾಡಿರಿ.**

## ಸಂಭಾಷಣೆ ಬರೆಯಿರಿ

ಈ ಕತೆಯಲ್ಲಿ ಆಶಾನಂದನು ಅನಾರೋಗ್ಯಕ್ಕೆ ತುತ್ತಾದುದನ್ನು ನೀವು ತಿಳಿದಿರುವಿರಿ. ತನ್ನ ಅನಾರೋಗ್ಯಕ್ಕೆ ಕಾರಣವೇನೆಂದು ತಿಳಿದುಕೊಳ್ಳಲು ಗುರುಗಳಲ್ಲಿ ವಿಚಾರಿಸುತ್ತಾನೆ. ಈ ಸಂದರ್ಭದಲ್ಲಿ ಅವರಿಬ್ಬರೊಳಗೆ ನಡೆದ ಮಾತುಕತೆಯನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

## ಕಿರುಲೇಖನ ಬರೆಯಿರಿ

ಅತಿಯಾದ ಆಹಾರ ಸೇವನೆಯಿಂದ ಆಗುವ ತೊಂದರೆಗಳ ಕುರಿತು ತಿಳಿದಿರುವಿರಲ್ಲವೇ? ಅಂತೆಯೇ ಉತ್ತಮ ಆರೋಗ್ಯಕ್ಕೆ 'ಗ್ರಾಮೀಣ ಖಾದ್ಯಗಳು' ಎಂಬ ವಿಷಯದ ಕುರಿತು ಕಿರುಲೇಖನ ಬರೆಯಿರಿ.

## ಪಾತ್ರಚಿತ್ರಣ ಬರೆಯಿರಿ

ಈ ಕತೆಯಲ್ಲಿ ಯಾವೆಲ್ಲಾ ಪಾತ್ರಗಳು ಬಂದಿವೆ? ಅವುಗಳಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು? ಅದರ ಪಾತ್ರ ಚಿತ್ರಣ ಮಾಡಿರಿ.

## ಶೀರ್ಷಿಕೆ ಬರೆಯಿರಿ

'ಹೊಟ್ಟೆಬಾಕ ಶಿಷ್ಯ' ಎಂಬ ಕತೆಗೆ ಸೂಕ್ತವಾದ ಇತರ ಯಾವೆಲ್ಲ ಶೀರ್ಷಿಕೆಗಳನ್ನು ನೀಡಬಹುದು? ಸಮರ್ಥಿಸಿ ಬರೆಯಿರಿ.

## ಪದವಿಂಗಡಿಸಿರಿ

ಕೆಳಗಿನ ಪದಗಳನ್ನು ವಿಂಗಡಿಸಿ ಬರೆಯಿರಿ.

ನಿತ್ಯೋಪಯುಕ್ತ -

ಕಾಲಿಗೆರಗಿದನು -

ಸಾಧ್ಯವಿಲ್ಲ -

ಕಷ್ಟವಾಯಿತು -

ಗುಣಪಡಿಸಲಾಗದ -

ಅರಿವಾಯಿತು -

## ವಾಕ್ಯ ರಚಿಸಿರಿ

ಕೆಳಗೆ ನೀಡಿದ ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ.

ಮಾದರಿ : ಆಶಾನಂದನಿಗೆ ತನ್ನ ತಪ್ಪಿನ ಅರಿವಾಯಿತು. ಅವನು ತನ್ನ ಕಣ್ಣನ್ನು ತೆರೆಸಿದ ಗುರುಗಳ ಪಾದಗಳ ಮೇಲೆ ಹೊರಳಾಡಿದನು.

ಆಶಾನಂದನಿಗೆ ತನ್ನ ತಪ್ಪಿನ ಅರಿವಾದಾಗ ತನ್ನ ಕಣ್ಣು ತೆರೆಸಿದ ಗುರುಗಳ ಪಾದಗಳ ಮೇಲೆ ಹೊರಳಾಡಿದನು.

- ನಾವು ದಿನನಿತ್ಯ ವ್ಯಾಯಾಮ ಮಾಡಬೇಕು. ಇದರೊಂದಿಗೆ ಪೌಷ್ಟಿಕ ಆಹಾರವನ್ನು ಸೇವಿಸಬೇಕು.
- ನಾವು ತ್ಯಾಜ್ಯಗಳನ್ನು ಅಲ್ಲಲ್ಲಿ ಎಸೆಯಬಾರದು. ಪರಿಸರವನ್ನು ಶುಚಿಯಾಗಿಡಬೇಕು.
- ನಾವು ನಿಯಮಿತವಾಗಿ ಸ್ನಾನ ಮಾಡಬೇಕು. ಸ್ವಚ್ಛವಾದ ಬಟ್ಟೆಗಳನ್ನು ಧರಿಸಬೇಕು.
- ಅತಿಯಾಗಿ ಆಹಾರ ಸೇವನೆ ಮಾಡಬಾರದು. ಇದು ನಮ್ಮ ಆರೋಗ್ಯವನ್ನು ಕೆಡಿಸುತ್ತದೆ.

# ಸರ್ವಜ್ಞನ ವಚನಗಳು




ನೇತ್ರಗಳು ಕಾಣಿಸವು | ಶ್ರೋತೃಗಳು ಕೇಳಿಸವು |
ಮುದ್ದಿನ ಮಾತುಗಳು ಸೊಗಸವು | ಬೋನದಾ
ಮುದ್ದೆ ತಪ್ಪಿದರೆ ಸರ್ವಜ್ಞ ||

ಜೋಳವನು ತಿಂಬುವನು | ತೋಳದಂತಾಗುವನು |
ಬೇಳೆ-ಬೆಲ್ಲಗಳನುಂಬುವನು | ಬಹುಕಾಲ
ಬಾಳನೆಂದರಿಗೂ ಸರ್ವಜ್ಞ ||

ಮೊಸರು ಇಲ್ಲದ ಊಟ | ಕೆಸರು ಇಲ್ಲದ ಗದ್ದೆ |
ಹಸನವಿಲ್ಲದವಳ ಮನೆವಾರ್ತೆ| ತಿಪ್ಪೆಯ
ಕಸದಂತೆ ಸರ್ವಜ್ಞ ||

ಅನ್ನದಾನಗಳಿಗಿಂತ | ಮುನ್ನ ದಾನಗಳಿಲ್ಲ |
ಅನ್ನಕ್ಕೆ ಮಿಗಿಲು ಇನ್ನಿಲ್ಲ | ಜಗದೊಳಗೆ
ಅನ್ನವೇ ಪ್ರಾಣ ಸರ್ವಜ್ಞ ||

ಕಣ್ಣಿನಿಂದಲೇ ಪುಣ್ಯ | ಕಣ್ಣಿನಿಂದಲೇ ಪಾಪ |
ಕಣ್ಣಿನಿಂದಿಹವು ಪರವಕ್ಕು | ಲೋಕಕ್ಕೆ
ಕಣ್ಣೇ ಕಾರಣವು ಸರ್ವಜ್ಞ ||



## ಕವಿ ಪರಿಚಯ



ಸರ್ವಜ್ಞ ಕ್ರಿಸ್ತಶಕ ಸುಮಾರು 17 ನೆಯ ಶತಮಾನದ ಕವಿ. ಹಾವೇರಿಯ ಹೀರೆಕೇರೂರು ತಾಲೂಕಿನ ಅಬಲೂರು ಇವರ ಜನ್ಮಸ್ಥಳ. ವಿಸ್ತಾರವಾದ ಲೋಕಾನುಭವ, ವಿಶಾಲವಾದ ಜೀವನ ದೃಷ್ಟಿಯನ್ನು ಪಡೆದ ಇವರು 'ಸರ್ವಜ್ಞ' ಎಂಬ ಅಂಕಿತದಿಂದ ಮುಕ್ತಾಯವಾಗುವ ತ್ರಿಪದಿಗಳನ್ನು ರಚಿಸಿದ್ದಾರೆ. ಕಣ್ಣಿಗೆ ಕಂಡ ಸತ್ಯಗಳನ್ನು, ಮನಸ್ಸಿಗೆ ತಟ್ಟಿದ ಸಂಗತಿಗಳನ್ನು ಕುರಿತು ನಿರ್ಭಿಡೆಯಿಂದ ಪ್ರತಿಕ್ರಿಯಿಸಿದ ಆಶು ಕವಿ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಭಾವ ಕೋಶದಲ್ಲಿ ವಿಶಿಷ್ಟ ಗುರುತಾಗಿ ಉಳಿದು ಬಂದಿರುವ ಇವರ ತ್ರಿಪದಿಗಳು ಸಾರ್ವಕಾಲಿಕ ಮಹತ್ವದಿಂದ ಗಮನ ಸೆಳೆಯುತ್ತವೆ.

## ಚಟುವಟಿಕೆಗಳು

### ಹಾಡಿರಿ

- ಈ ವಚನಗಳನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

- ಬೋನದ ಮುದ್ದೆ ತಪ್ಪಿದರೆ ಏನಾದೀತು?
- ತಿಪ್ಪೆಯ ಕಸದಂತೆ ಇರುವುದು ಯಾವುದು?
- ದಾನಗಳಲ್ಲಿ ಶ್ರೇಷ್ಠವಾದುದು ಯಾವುದು?

### ಸಾಲು ಗುರುತಿಸಿರಿ

ಇಲ್ಲಿ ನೀಡಿದ ಆಶಯಗಳಿರುವ ಸಾಲುಗಳನ್ನು ಪದ್ಯಭಾಗದಿಂದ ಹುಡುಕಿ ಬರೆಯಿರಿ.

- ಆಹಾರವನ್ನು ಸರಿಯಾಗಿ ಸೇವಿಸದಿದ್ದರೆ ಕಣ್ಣು ಕಿವಿಗಳು ಸರಿಯಾಗಿ ಕೆಲಸ ನಿರ್ವಹಿಸಲಾರವು.

- ದಾನಗಳಲ್ಲಿ ಅನ್ನದಾನವು ಶ್ರೇಷ್ಠವಾದುದು. ಅನ್ನಕ್ಕೆ ಮಿಗಿಲಾಗದು ಜಗತ್ತಿನಲ್ಲಿ ಯಾವುದೂ ಇಲ್ಲ.
- ಕಣ್ಣು ಎಂಬುದು ಪಾಪಪುಣ್ಯಗಳಿಗೂ ಇಹಪರದ ಸುಖಗಳಿಗೂ ಕಾರಣವಾಗಿರುತ್ತದೆ.

## ಪ್ರಾಸ ಪದಗಳನ್ನು ಗುರುತಿಸಿರಿ

ವಚನಗಳಲ್ಲಿ ಬಂದಿರುವ ಪ್ರಾಸ ಪದಗಳನ್ನು ಬರೆಯಿರಿ.

## ಕರಪತ್ರ ಬರೆಯಿರಿ

ವಚನಗಳ ಹಿನ್ನೆಲೆಯಲ್ಲಿ 'ಉತ್ತಮ ಆರೋಗ್ಯಕ್ಕೆ ಸಾತ್ವಿಕ ಆಹಾರ' ಎನ್ನುವ ವಿಚಾರದಲ್ಲಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಒಂದು ಕರಪತ್ರ ರಚಿಸಿರಿ.

## ಹೋಲಿಸಿರಿ

ಇಲ್ಲಿ ನೀಡಲಾದ ಎರಡು ಪದ್ಯಗಳನ್ನು ಪರಸ್ಪರ ಹೋಲಿಸಿ ಟಿಪ್ಪಣಿ ಬರೆಯಿರಿ.

1. ಮೊಸರು ಇಲ್ಲದ ಊಟ | ಕೆಸರು ಇಲ್ಲದ ಗದ್ದೆ |
   ಹಸನವಿಲ್ಲದವಳ ಮನೆವಾರ್ತೆ | ತಿಪ್ಪೆಯ
   ಕಸದಂತೆ ಸರ್ವಜ್ಞ ||

2. ಹಸಿಯದಿರೆ ಉಣಬೇಡ | ಹಸಿದು ಮತ್ತಿರಬೇಡ
   ಬಿಸಿಬೇಡ, ತಂಗಳುಣಬೇಡ | ವೈದ್ಯರ
   ಬೆಸಸಲೇ ಬೇಡ ಸರ್ವಜ್ಞ ||

## ಒಗಟುಗಳಿಗೆ ಉತ್ತರಿಸಿರಿ

ಕೆಳಗೆ ಕೆಲವು ಒಗಟುಗಳನ್ನು ನೀಡಲಾಗಿದೆ. ಅವುಗಳಿಗೆ ಉತ್ತರವನ್ನು ಬರೆಯಿರಿ.


- ಹಸಿರು ಕೊಡ ತುಂಬಾ ಸಿಹಿ ನೀರು
- ಮಣ್ಣಿನಡಿಯಲ್ಲಿ ಚಿನ್ನದ ಬೇರು.
- ನನ್ನ ಅಪ್ಪಣ್ಣಜ್ಜನ ಮೈಯೆಲ್ಲಾ ಮುಳ್ಳು ಮುಳ್ಳು.
- ಸಾವಿರ ಹಕ್ಕಿಗಳಿಗೆ ಒಂದೇ ಕೊಕ್ಕು.
- ನನ್ನ ಅಜ್ಜಿಯ ಮೈಯೆಲ್ಲಾ ಕಜ್ಜಿ.

## ಸಂಚಿಕೆ ತಯಾರಿಸಿರಿ

ಸರ್ವಜ್ಞನ ವಚನಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

# ಮೂಗಾಯಣ

ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮ ಇವುಗಳಲ್ಲಿ ಯಾವುದಕ್ಕೆ ಪ್ರಥಮ ಸ್ಥಾನ ಕೊಡಬೇಕೆಂದು ಯಾರಾದರೂ ಕೇಳಿದರೆ ನಾನು ಥಟ್ಟನೆ



ಉತ್ತರಿಸಿ ಬಿಡುತ್ತೇನೆ, 'ಮೂಗಿಗೆ'. 'ನಿಮಗೇಕೆ ಮೂಗಿನ ಮೇಲೆ ಅಷ್ಟೊಂದು ಮಮಕಾರ' ಎಂದು ನೀವು ಕೇಳಬಹುದು. ಒಂದು ಕುಟುಂಬದಲ್ಲಿ ಐದು ಮಂದಿ ಮಕ್ಕಳಿದ್ದರೆ ಸಾಮಾನ್ಯವಾಗಿ ಹೆತ್ತವರು ಎಲ್ಲರನ್ನೂ ಪ್ರೀತಿಯಿಂದ ನೋಡುತ್ತಾರೆ. ಆದರೆ ಒಬ್ಬರ ಅಥವಾ ಇಬ್ಬರ ಮೇಲೆ ಹೆಚ್ಚು ಅಕ್ಕರೆ ಇರಬಹುದು. ಅದಕ್ಕೆ ಅವರದ್ದೇ ಆದ ಕಾರಣಗಳೂ ಇರಬಹುದು. ಹಾಗೆಯೇ ಪಂಚೇಂದ್ರಿಯಗಳಲ್ಲಿ ಯಾವುದೇ ರೀತಿಯ ಪಕ್ಷಪಾತ ಭಾವನೆ ಇಲ್ಲ. ಆದರೂ ಮೂಗಿಗೆ ನಾನು ಸಮಾನರಲ್ಲಿ ಪ್ರಥಮ ಎಂಬ ಗಣನೆಯನ್ನು ಕೊಟ್ಟಿದ್ದೇನೆ. ಅದಕ್ಕೆ ನನ್ನದೇ ಆದ ಕಾರಣಗಳೂ ಇವೆ.

ಪಂಚೇಂದ್ರಿಯಗಳಲ್ಲಿ ಮೂಗಿಗೆ ವಿಶೇಷ ಅಂತಸ್ತಿದೆಯೆಂದು ನನಗೆ ಮನವರಿಕೆಯಾದದ್ದು, ನನಗೊಮ್ಮೆ ಶೀತಬಾಧೆ ಉಂಟಾದಾಗ ಮೂಗಿನ ಪ್ರತಾಪದ ಅರಿವಾಯಿತು. ಮೂಗು ಕಟ್ಟಿದಂತಾಗಿ ಉಸಿರಾಡಲು ತ್ರಾಸವಾಯಿತು ಮೂಗಿನಲ್ಲಿ ಪ್ರವಾಹ ಆರಂಭವಾಯಿತು. ಬಿಟ್ಟು ಬಿಟ್ಟು ಬಂದ ಸೀನು ಇಡೀ ಶರೀರವನ್ನು ನಡುಗಿಸಿತು. ಅಸ್ವಸ್ಥನಾಗಿ ಚಡಪಡಿಸಿದೆ.

ಮೂಗಿನ ಮೇಲೆ ಕ್ರೋಧ ಉಕ್ಕಿ ಬಂತು. ಆದರೆ ಅದು ತಾತ್ಕಾಲಿಕವಾಗಿತ್ತು. ಶೀತ ಬಾಧೆಯೂ ತಾತ್ಕಾಲಿಕ, ಕ್ರೋಧವೂ ತಾತ್ಕಾಲಿಕ. ಮಕ್ಕಳು ತಂಟೆ ಮಾಡುವಾಗ ಒಮ್ಮೊಮ್ಮೆ ನಿಮಗೆ ಸಿಟ್ಟು ಬರುವುದಿಲ್ಲವೇ? ಆದರೆ ಸ್ವಲ್ಪ ಹೊತ್ತು ಕಳೆದ ಮೇಲೆ ನಿಮ್ಮ ಸಿಟ್ಟು ಮಾಯವಾಗಿ ನೀವು ಅವರನ್ನು ಮುದ್ದು ಮಾಡುತ್ತೀರಿ! ಅಂತೆಯೇ ಶೀತ ಬಾಧೆ ದೂರವಾದ ಕೂಡಲೇ ಮೂಗಿನ ಮೇಲಿನ ನನ್ನ ಪ್ರೀತಿ ಮರುಕಳಿಸಿತು.ಉಳಿದ ಇಂದ್ರಿಯಗಳು ಕೆಲಸ ಮಾಡದಿದ್ದರೂ ಸ್ವಲ್ಪ ಕಾಲ ಬದುಕಬಹುದು. ಆದರೆ ಮೂಗು ಮುಷ್ಕರ ಹೂಡಿದರೆ ಪರಿಣಾಮ ಏನಾಗಬಹುದು? ಎಂದು ಊಹಿಸಿ ಬೆವರಿದ್ದೆ. ಅಂದಿನಿಂದಲೇ ನಾನು ಮೂಗಿನ ಅಪ್ಪಟ ಅಭಿಮಾನಿಯಾದೆ.



ನಮಗೆ ಎರಡು ಕಣ್ಣುಗಳಿವೆ. ಎರಡು ಕಿವಿಗಳಿವೆ. ಆದರೆ ಮೂಗು ಇರುವುದು ಒಂದೇ ಎಂದು ಬೇಸರಿಸದಿರಿ. ಮೂಗಿನ ಮೂಲಕ ನಮಗೆ ತಲುಪುವ ರುಚಿಯಾದ ತಿಂಡಿಗಳ ಮತ್ತು ಪದಾರ್ಥಗಳ ಸುವಾಸನೆ ಬಾಯಿಯಲ್ಲಿ ನೀರೂರುವಂತೆ ಮಾಡುವುದಿಲ್ಲವೇ? ಹಾಗೆಯೇ ದುರ್ಗಂಧದ ಕುರಿತು ಎಚ್ಚರಿಕೆ ನೀಡಿ ಉಗುಳುವಂತೆಯೂ ಮಾಡುತ್ತದಲ್ಲ!. ದುರ್ಗಂಧ ಮೂಗನ್ನು ಪ್ರವೇಶಿಸದಂತೆ ತಡೆಯಲು ನಾವು ಕೈಯಿಂದಲೋ, ಕರವಸ್ತ್ರದಿಂದಲೋ ಮೂಗನ್ನು ಗಟ್ಟಿಯಾಗಿ ಮುಚ್ಚಿಕೊಳ್ಳುತ್ತೇವೆ. ಮಾಲಿನ್ಯವನ್ನು ಸಿಕ್ಕಸಿಕ್ಕಲ್ಲಿ ಎಸೆಯುವುದರಿಂದಾಗಿ ಅದರಿಂದ ಹೊರಬರುವ ದುರ್ಗಂಧವನ್ನು ಘ್ರಾಣಿಸಿ ಮೂಗಿನ



ಘ್ರಾಣಶಕ್ತಿ ಇತ್ತೀಚೆಗೆ ಕುಂದುತ್ತಾ ಬಂದಿದೆ. ಅನುನಾಸಿಕಗಳಾದ ಙ, ಞ, ಣ, ನ, ಮ ಎಂಬ ವರ್ಣಗಳನ್ನು ಮೂಗಿನ ಸಹಾಯವಿಲ್ಲದೆ ನಮಗೆ ಉಚ್ಚರಿಸಲು ಸಾಧ್ಯವಿದೆಯಾ? ಇಲ್ಲ. ಅಜ್ಜಿ ಒಮ್ಮೆ ಹೇಳಿದ್ದು ನನಗೆ ನೆನಪಿದೆ. “ನಿನ್ನ ಅಜ್ಜನಿಗೆ ಮೂಗಿನ ತುದಿಯಲ್ಲಿ ಕೋಪ!" ನಾನು ಆ ದಿವಸವಿಡೀ ಅಜ್ಜನ ಮೂಗಿನ ಮೇಲೆ ಕಣ್ಣಿಟ್ಟಿದ್ದೆ. ಆದರೆ

ನನಗೆ ಅಲ್ಲಿ ಯಾವುದೇ ವಿಶೇಷತೆ ಕಾಣಲಿಲ್ಲ. ದೊಡ್ಡವನಾದ ಮೇಲೆ ನನಗೆ ಅಜ್ಜಿಯ ಮಾತಿನ ಅರ್ಥವಾಯಿತು.

ಮಕ್ಕಳಿಗೆ ಓದಲು ಹೇಳಿ ಅಮ್ಮ ಅಡಿಗೆ ಮನೆಯಲ್ಲಿ ತಿಂಡಿ ತಯಾರಿಸುವಾಗ ಅದರ ಪರಿಮಳಕ್ಕೆ ಮಕ್ಕಳ ಮೂಗಿನ ಹೊಳ್ಳೆಯಲ್ಲಿ ಉಂಟಾಗುವ ಚಲನೆಯನ್ನು ದಿಟ್ಟಿಸುವುದು ಕಣ್ಣಿಗೆ ಒಂದು ಹಬ್ಬ!



ವಿವಿಧ ಆಕಾರದ ಮೂಗುಗಳಿವೆ ಎಂದು ನನಗೆ ಖಾತ್ರಿಯಾಯಿತು. ಉದ್ದದ, ಚೂಪಾದ ಮೂಗು, ದೊಡ್ಡ ಮೂಗು, ಚಿಕ್ಕ ಮೂಗು, ಚಪ್ಪಟೆ ಆಕಾರದ ಮೂಗು, ಹಂದಿ ಮೂಗು, ಗಿಳಿಮೂಗು, ಉಬ್ಬಿರುವ (ಅಂಬಡೆ) ಮೂಗು, ಕೆಳಕ್ಕೆ ಬಾಗಿರುವ (ಗರುಡ) ಮೂಗು, ಮೇಲಕ್ಕೆ ಚಾಚಿರುವ ಮೂಗು, ಬಿಲ್ಲಿನಾಕಾರದ ಮೂಗು ಇತ್ಯಾದಿ ಮೂಗುಗಳಿವೆ, ಆದರೆ ಕವಿಗಳು ವರ್ಣಿಸುವ ಸಂಪಿಗೆ ಮೂಗು ನನಗೆ ಕಾಣಿಸಲೇ ಇಲ್ಲ.

ಒಳ್ಳೆಯ ಆಕಾರದ ಮೂಗು ಮುಖದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಅದಕ್ಕಾಗಿಯೇ ಇರಬೇಕು ರಾಮಾಯಣದ ಲಕ್ಷ್ಮಣ ಶೂರ್ಪನಖಿಯ ಮೂಗನ್ನು ಕತ್ತರಿಸಿ ಅವಳ ಮುಖದ ಅಂದವನ್ನು ಕೆಡಿಸಿದ್ದು. ವಿಶ್ವ ಸುಂದರಿಯರ ಮತ್ತು ಪ್ರಸಿದ್ಧ ಚಲನಚಿತ್ರ ತಾರೆಯರ ಸೌಂದರ್ಯ ರಹಸ್ಯ ಅವರ ಸುಂದರವಾದ ಮೂಗೇ ಆಗಿರಬೇಕೆಂದು ನನ್ನ ಅನಿಸಿಕೆ.

ಮಲಯಾಳದಲ್ಲಿ 'ಮೂಗಿಲ್ಲದವರ ರಾಜ್ಯದಲ್ಲಿ ತುಂಡು ಮೂಗಿನವ ರಾಜ' ಎಂಬ ಗಾದೆಯಿದೆ. 'ಕುರುಡರ ಊರಿನಲ್ಲಿ ಒಕ್ಕಣ್ಣನೇ ಅರಸ' ಎಂಬ ನಾಣ್ಣುಡಿಯ ಅರ್ಥವನ್ನೇ ಇದು ಕೊಡುತ್ತದೆ. ಕನ್ನಡಕ ಧರಿಸಲು ಮೂಗು ಕಣ್ಣು ಮತ್ತು ಕಿವಿಯೊಂದಿಗೆ ಸಹಕರಿಸುತ್ತದೆ. ಮೂಗಿನ ಒಳಗಿರುವ ಕೂದಲುಗಳು ಶ್ವಾಸಕೋಶಕ್ಕೆ ಹೋಗುವ ಗಾಳಿಯನ್ನು ಶುದ್ಧೀಕರಿಸುವುದು ಮಾತ್ರವಲ್ಲದೆ, ಧೂಳನ್ನು ತಡೆಯುತ್ತವೆ.



ಮಾಷ್ಟ್ರು ಮಕ್ಕಳ ಮೂಗಿನ ತಂಟೆಗೆ ಕೈ ಹಾಕುವುದಿಲ್ಲ. ಅದು ಕಿವಿ ಹಿಂಡಿದಷ್ಟು ಸುಲಭವಲ್ಲ. ನೆಂಟರು ಬರುವಾಗ ಮೂಗು ಮುರಿಯದಿರಿ, ನಿಮ್ಮ ಮೂಗನ್ನು ತುರಿಸಿಕೊಳ್ಳಿ. ಆದರೆ ಇತರರ ಕೆಲಸಗಳಲ್ಲಿ ಅನಗತ್ಯ ಮೂಗು ತೂರಿಸಬೇಡಿ.

**- ವೈ.ಸತ್ಯನಾರಾಯಣ, ಕಾಸರಗೋಡು**

## ಲೇಖಕರ ಪರಿಚಯ



ವೈ. ಸತ್ಯನಾರಾಯಣ ಕಾಸರಗೋಡಿನ ಕನ್ನಡ ಸಾಹಿತಿಗಳು. ಇವರು 05.10.1940 ರಲ್ಲಿ ನೆಕ್ರಾಜೆ ಗ್ರಾಮದ ಪಿಲಿಕೂಡ್ಲು ಎಂಬಲ್ಲಿ ಜನಿಸಿದರು. ವೈ.ಪರಮೇಶ್ವರ ಇವರ ತಂದೆ. ಪರಮೇಶ್ವರಿ ಅಮ್ಮ ಇವರ ತಾಯಿ. ಶ್ರೀಯುತರು ಕಾಸರಗೋಡಿನ ಬಿ.ಇ.ಎಂ. ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿರುವರು.

ಪಲಾಯನ, ಕಲ್ಪವೃಕ್ಷದಲ್ಲಿ ವಿಷಬೀಜಗಳು, ಹಾಸ, ಮೋದಕ, ಉಡುಗೊರೆ, ಗ್ರಹಣ, ನಗೆಯಸೊಬಗು, ತಡವಾಗಿ ಬಂದ ರೈಲು, ಬಡಾಯಿ ಎಕ್ಸ್‌ಪ್ರೆಸ್ ಇಂತಹ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಇವರ 'ಬಡಾಯಿ ಎಕ್ಸ್‌ಪ್ರೆಸ್' ಎಂಬ ನಗೆ ಬರಹ ಸಂಕಲನದಿಂದ ಪ್ರಸ್ತುತ 'ಮೂಗಾಯಣ' ಎಂಬ ಭಾಗವನ್ನು ಆಯ್ದುಕೊಳ್ಳಲಾಗಿದೆ.


## ಚಟುವಟಿಕೆಗಳು

### ಉತ್ತರಿಸಿರಿ

- ಲೇಖಕರು ಪಂಚೇಂದ್ರಿಯಗಳಲ್ಲಿ ಯಾವುದಕ್ಕೆ ಪ್ರಥಮ ಪರಿಗಣನೆಯನ್ನು ನೀಡಿದ್ದಾರೆ?
- ಲೇಖಕರು ಮೂಗಿನ ಅಪ್ಪಟ ಅಭಿಮಾನಿಯಾದುದು ಯಾವಾಗ?
- ಮೂಗಿನ ವಿವಿಧ ವಿಧಗಳು ಯಾವುವು?

## ಲೇಖನ ಬರೆಯಿರಿ

ಮೂಗು ಮತ್ತು ಇತರ ಅಂಗಗಳೆಲ್ಲವೂ ಶರೀರಕ್ಕೆ ಅಗತ್ಯವಲ್ಲವೇ? ನಮ್ಮ ಶರೀರವನ್ನು ಆರೋಗ್ಯಕರವಾಗಿ ಇಟ್ಟುಕೊಳ್ಳಲು ಶುಚಿತ್ವವು ಪ್ರಧಾನ ಪಾತ್ರ ವಹಿಸುತ್ತದೆ. 'ವ್ಯಕ್ತಿ ಶುಚಿತ್ವ ಮತ್ತು ಆರೋಗ್ಯ' ಎಂಬ ವಿಷಯದ ಕುರಿತು ಒಂದು ಲೇಖನವನ್ನು ತಯಾರಿಸಿರಿ.




## ಮನವಿಪತ್ರ ತಯಾರಿಸಿರಿ

ನಮ್ಮ ಪರಿಸರದಲ್ಲಿ ಅಲ್ಲಲ್ಲಿ ತ್ಯಾಜ್ಯಗಳನ್ನು ಎಸೆಯುವುದರಿಂದಾಗಿ ಮಾಲಿನ್ಯ ತುಂಬಿ ದುರ್ಗಂಧ ಉಂಟಾಗಿ ಮೂಗು ಮುಚ್ಚಿಕೊಳ್ಳುವಂತಾಗಿದೆ. ಇದನ್ನು ತಡೆಗಟ್ಟುವುದಕ್ಕೋಸ್ಕರ ತ್ಯಾಜ್ಯಗಳನ್ನು ಸರಿಯಾಗಿ ವಿಲೇವಾರಿ ಮಾಡುವಂತೆ ಪಂಚಾಯತ್ ಅಧ್ಯಕ್ಷರಿಗೆ ಒಂದು ಮನವಿಯನ್ನು ಸಲ್ಲಿಸಿರಿ.

## ಜಾಹೀರಾತು ತಯಾರಿಸಿರಿ

ದೂರದರ್ಶನ ಹಾಗೂ ಪತ್ರಿಕೆಗಳಲ್ಲಿ ನೀವು ಹಲವು ವಿಷಯಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ನೋಡಿರಬಹುದು. ಶರೀರ ಸೌಂದರ್ಯವನ್ನು ಹೆಚ್ಚಿಸುವ, ಪ್ರಾಕೃತಿಕ ಉತ್ಪನ್ನದ ಮಾರಾಟಕ್ಕೆ ಸಂಬಂಧಿಸಿದ ಜಾಹೀರಾತನ್ನು ತಯಾರಿಸಿರಿ.

## ನಗೆ ಬರಹ

ಶರೀರದ ಅಂಗಗಳಲ್ಲಿ ಉಂಟಾದ ಮೂಗಿನ ಕುರಿತಾದ ನಗೆಲೇಖನವನ್ನು ಓದಿ ಆಸ್ವಾದಿಸಿದಿರಲ್ಲವೇ? ಅಂತೆಯೇ ಶರೀರದ ಇನ್ನೆರಡು ಅಂಗಗಳಾದ ಕಣ್ಣು ಅಥವಾ ಕಿವಿಯ ಮಹತ್ವದ ಕುರಿತು ವಿವರಿಸುವ ಒಂದು ನಗೆ ಬರಹ ಬರೆಯಿರಿ.

## ವಾಕ್ಯ ರಚಿಸಿರಿ

**ಈ ಕೆಳಗಿನ ವಾಕ್ಯಗಳನ್ನು ಗಮನಿಸಿ**

ಇತರರ ಕೆಲಸಗಳಲ್ಲಿ ಅನಗತ್ಯ ಮೂಗು ತೂರಿಸಬೇಡಿ.

ಇಲ್ಲಿ ಅಡಿಗೆರೆ ಎಳೆದ ಪದ ಪ್ರಯೋಗ ವಿಶೇಷವಾಗಿ ಕಾಣಬಹುದು. 'ಮೂಗು ತೂರಿಸಬೇಡಿ' ಎಂಬ ಪದ ಸಮೂಹಕ್ಕೆ ನೇರವಾದ ಅರ್ಥವಲ್ಲದೆ, ಇನ್ನೊಬ್ಬರ ವಿಷಯದಲ್ಲಿ ಅನಗತ್ಯ ಹಸ್ತಕ್ಷೇಪ ಮಾಡಬಾರದು ಎನ್ನುವ ಅರ್ಥವನ್ನು ನೀಡುತ್ತದೆ. ಇಂತಹ ಪದಸಮೂಹಗಳನ್ನು 'ನುಡಿಗಟ್ಟುಗಳು' ಎನ್ನುವರು.

**ಕೆಳಗೆ ನೀಡಿದ ನುಡಿಗಟ್ಟುಗಳನ್ನು ಗಮನಿಸಿ.**

| | | |
|---|---|---|
| ಕಾಲಿಗೆ ಬುದ್ಧಿ ಹೇಳು | - | ಓಡಿ ಹೋಗು |
| ಕೈ ಕೊಡು | - | ಮೋಸ ಮಾಡು |
| ತಲೆದೂಗು | - | ಮೆಚ್ಚುಗೆ ಸೂಚಿಸು |
| ಎತ್ತಿದ ಕೈ | - | ಪ್ರವೀಣ |
| ಕಣ್ಣಿಗೆ ಹಬ್ಬ | - | ಬಹಳ ಸಂತೋಷ |
| ಕಿವಿ ಕೊಡು | - | ತಲ್ಲೀನತೆಯಿಂದ ಕೇಳು |

ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಬಳಸಿದಾಗ-

- ಪೊಲೀಸರನ್ನು ಕಂಡಾಗ ಕಳ್ಳನು ಕಾಲಿಗೆ ಬುದ್ಧಿ ಹೇಳಿದನು.
- ಇಂದು ಕೆಲಸಕ್ಕೆ ಬರುತ್ತೇನೆಂದು ಹೇಳಿದ ತಿಮ್ಮ ಬಾರದೆ ಕೈ ಕೊಟ್ಟನು.
- ವೇದಿಕೆಯಲ್ಲಿ ಅದ್ಭುತ ಭಾಷಣಗೈದ ಹುಡುಗನನ್ನು ನೋಡಿ ಸಭೆಗೆ ಸಭೆಯೇ ತಲೆದೂಗಿತು.
- ಸಚಿನ್ ತೆಂಡೂಲ್ಕರ್ ಕ್ರಿಕೆಟ್ ಆಟದಲ್ಲಿ ಎತ್ತಿದ ಕೈ.
- ಹೂದೋಟದಲ್ಲಿ ಅರಳಿರುವ ಬಣ್ಣ ಬಣ್ಣದ ಹೂಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.
- ಅಧ್ಯಾಪಕರು ಕತೆಯನ್ನು ಹೇಳಿದಾಗ ವಿದ್ಯಾರ್ಥಿಗಳು ಕಿವಿ ಕೊಟ್ಟು ಆಲಿಸಿದರು.

ಇಂತಹ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿ ಅದರ ಅರ್ಥವನ್ನು ತಿಳಿದು ವಾಕ್ಯ ರಚಿಸಿರಿ.

## ಸಂಗ್ರಹಿಸಿರಿ

ಙ, ಞ, ಣ, ನ, ಮ. ಈ ಅಕ್ಷರಗಳನ್ನು ಮೂಗಿನ ಸಹಾಯದಿಂದ ಉಚ್ಚರಿಸುತ್ತೇವೆ ಇವುಗಳನ್ನು ಅನುನಾಸಿಕ ಅಕ್ಷರಗಳೆಂದು ಕರೆಯುತ್ತಾರೆ. ಉದಾಹರಣೆಗೆ, ವಿಜ್ಞಾನ, ಹಣ, ಧನ, ಮರ.

ಅನುನಾಸಿಕ ಅಕ್ಷರಗಳಿರುವ ಇಂತಹ ಪದಗಳನ್ನು ಸಂಗ್ರಹಿಸಿರಿ.

## ಜೊತೆಗೊಳಿಸಿರಿ

ಗಾದೆಗಳಿಗೆ ಎರಡು ರೀತಿಯ ಅರ್ಥಗಳಿವೆ. ಒಂದು ಅದು ನೇರವಾಗಿ ನೀಡುವ ಅರ್ಥ, ಇನ್ನೊಂದು ಅದು ಸೂಚಿಸುವ ಅರ್ಥ. ಇಲ್ಲಿ ನೀಡಿದ ಪಟ್ಟಿಯಲ್ಲಿ ಗಾದೆ ಮಾತುಗಳನ್ನೂ ಅವುಗಳು ನೀಡುವ ಸೂಚ್ಯಾರ್ಥಗಳನ್ನೂ ಕೊಡಲಾಗಿದೆ. ಆಯಾ ಗಾದೆ ಮಾತಿಗೆ ಯೋಗ್ಯವಾದ ಸೂಚ್ಯಾರ್ಥಗಳನ್ನು ಜೊತೆಗೊಳಿಸಿ ಬರೆಯಿರಿ.

| **ಗಾದೆ ಮಾತುಗಳು** | **ಸೂಚ್ಯಾರ್ಥಗಳು** |
|---|---|
| • ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ. | • ಕಹಿಯಾದರು ಆರೋಗ್ಯಕ್ಕೆ ಹಿತಕರ. |
| • ಉಪ್ಪು ತಿಂದವನು ನೀರು ಕುಡಿದಾನು. | • ಪಕ್ಷಪಾತ ಮಾಡಬಾರದು. |
| • ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ. | • ಆರೋಗ್ಯ ಮತ್ತು ಮಾತಿನ ವಿಚಾರದಲ್ಲಿ ಅರಿತು ವ್ಯವಹರಿಸಬೇಕು. |
| • ಅಧರಕ್ಕೆ ಕಹಿ ಉದರಕ್ಕೆ ಸಿಹಿ. | • ಜ್ಞಾನಿಗಳು ವ್ಯರ್ಥ ಮಾತನಾಡುವುದಿಲ್ಲ. |
| • ತಾಳಿದವನು ಬಾಳಿಯಾನು. | • ತಪ್ಪು ಮಾಡಿದವನು ಶಿಕ್ಷೆ ಅನುಭವಿಸಬೇಕು. |
| • ತುಂಬಿದ ಕೊಡ ತುಳುಕುವುದಿಲ್ಲ. | • ತಾಳ್ಮೆಯಿದ್ದಲ್ಲಿ ಯಾವ ಸಂಕಷ್ಟಗಳನ್ನೂ ದಾಟಬಹುದು. |

## ಗಾದೆ ವಿಸ್ತರಿಸಿರಿ

### ತಾಳಿದವನು ಬಾಳಿಯಾನು

ಮನುಷ್ಯನ ಸಾಮಾನ್ಯ ಗುಣವೆಂದರೆ ಒಮ್ಮೆಲೇ ಎಲ್ಲವನ್ನು ಸಾಧಿಸಿ ಬಿಡಬೇಕೆಂಬುದು. ಹೇಗಾದರೂ ಮಾಡಿ ಆದಷ್ಟು ಬೇಗ ಎತ್ತರಕ್ಕೆ ಬೆಳೆಯಬೇಕು. ಗೌರವ ಸಂಪಾದಿಸಬೇಕು. ಆದರೆ ಇವುಗಳನ್ನು ಪಡೆಯಲು ಕೇವಲ ಮಾತಿನಿಂದ ಸಾಧ್ಯವಾಗದು. ಅದಕ್ಕೆ ಸಮಯ ಬರಬೇಕು. ಪ್ರಯತ್ನಪಡಬೇಕು. ಆಸೆ ಆಕಾಂಕ್ಷೆಗಳು ಗೌರವಾದರಗಳನ್ನು ಪಡೆಯಬೇಕು ನಿಜ. ಆದರೆ ಅದಕ್ಕೆ ಮುಖ್ಯವಾಗಿ ತಾಳ್ಮೆ ಬೇಕು. ಯಾವುದೇ ಯಶಸ್ಸಿಗೂ ತಾಳ್ಮೆ ಬಹಳ ಮುಖ್ಯ.

"ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ" ಈ ಗಾದೆ ಮಾತಿನ ಆಶಯವನ್ನು ಬರೆಯಿರಿ.

## ಸಂಚಿಕೆ ತಯಾರಿಸಿರಿ

ನೀವು ಓದಿದ ನಗೆ ಹನಿಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

# 3. ಬದುಕು ಬಂಗಾರ



## ಪ್ರವೇಶ ಚಟುವಟಿಕೆ




- ಹುಡುಗಿಯ ಆಲೋಚನೆ ಸರಿಯೇ? ನಿಮ್ಮ ಅಭಿಪ್ರಾಯವನ್ನು ತರಗತಿಯಲ್ಲಿ ಮಂಡಿಸಿರಿ.

# ಹೀಗೊಬ್ಬ ಭಗೀರಥ

'ಮನಸ್ಸಿದ್ದರೆ ಮಾರ್ಗ, ಛಲವಿದ್ದರೆ ಸಾಧನೆ' ಎಂಬ ಮಾತನ್ನು ನೀವು ಕೇಳಿರಬಹುದು. ಈ ಮಾತನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಅಮೈ ಮಹಾಲಿಂಗ ನಾಯ್ಕರ ಬಗ್ಗೆ ತಿಳಿಯೋಣ. ಇವರು, ಬೆಟ್ಟದಲ್ಲಿ ಸುರಂಗಗಳನ್ನು ಕೊರೆದು ಅದರಿಂದ ಬರುವ ನೀರನ್ನು ಉಪಯೋಗಿಸಿ, ಬರಡು ಭೂಮಿಯಲ್ಲಿ ಬಂಗಾರದಂತಹ ಬೆಳೆ ಪಡೆದವರು. ಸಾಧನೆಗೆ ಹಣ ಮುಖ್ಯವಲ್ಲ, ಕಠಿಣ ಪರಿಶ್ರಮ ಮತ್ತು ತಾಳ್ಮೆ ಅಗತ್ಯ ಎಂಬ ಸಂದೇಶವನ್ನು ಸಾರಿದವರು. ಬಡತನದಲ್ಲಿ ಹುಟ್ಟಿ ಬೆಳೆದ ಇವರು, ಕೂಲಿ ಕೆಲಸ ಮಾಡುತ್ತಾ ದಣಿವರಿಯದಂತೆ ಹಗಲಿರುಳು ದುಡಿದವರು. ಈ ಮೂಲಕ ಸ್ವಾವಲಂಬಿ ಬದುಕನ್ನು ರೂಪಿಸಿಕೊಂಡವರು. ಹೀಗೆ ಸ್ವಂತ ಪರಿಶ್ರಮದಿಂದ ಕೃಷಿ ಮಾಡಿ ಸಾಧನೆಗೈದ ಮಹಾಲಿಂಗ ನಾಯ್ಕರು ದೇಶದ ಶ್ರೇಷ್ಠ ಗೌರವಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾದರು. ಗುಡ್ಡದ ತಪ್ಪಲಲ್ಲಿರುವ ಇವರ ಕೃಷಿ ಭೂಮಿಯು ಈಗ ಎಲ್ಲರನ್ನೂ ತನ್ನತ್ತ ಸೆಳೆಯುತ್ತಿದೆ. ತನ್ನ ಸ್ವಂತ ಸಾಮರ್ಥ್ಯದಲ್ಲಿ ಇವರು ಮಾಡಿರುವ ಅದ್ಭುತ ಕೆಲಸಗಳು ಎಲ್ಲರನ್ನೂ ಬೆರಗು ಗೊಳಿಸುತ್ತಿವೆ.



ಕಾಸರಗೋಡಿನಿಂದ ಬದಿಯಡ್ಕ, ಪೆರ್ಲ, ಅಡ್ಕಸ್ಥಳ (ಕೇರಳದ ಗಡಿಪ್ರದೇಶ), ಅಡ್ಯನಡ್ಕ ಮಾರ್ಗವಾಗಿ ಸ್ವಲ್ಪ ಮುಂದೆ ಹೋದರೆ ಸಿಗುವ ಊರು ಕುದ್ದುಪದವು. ಅಲ್ಲಿಂದ ಬಲಬದಿಗೆ ಕಾಣುವ ಮಣ್ಣಿನ ಮಾರ್ಗದಲ್ಲಿ ಒಂದು ಕಿಲೋಮೀಟರ್ ಸಾಗಬೇಕು. ಅಲ್ಲಿಂದ ಮತ್ತೆ ಬಲಕ್ಕೆ ತಿರುಗಿ ಗುಡ್ಡ ಏರಿದರೆ ಮಹಾಲಿಂಗ ನಾಯ್ಕರ ಮನೆ ಮತ್ತು ಹಚ್ಚ ಹಸಿರು ತೋಟವು ಕಾಣಸಿಗುತ್ತದೆ.

ದಾನಿಯೊಬ್ಬರು ನೀಡಿದ ಎರಡು ಎಕರೆ ಖಾಲಿ ಜಾಗದಲ್ಲಿ ಮಹಾಲಿಂಗ ನಾಯ್ಕರು ತಮ್ಮ ಪತ್ನಿ ಲಲಿತ ಹಾಗೂ ಮೂವರು ಮಕ್ಕಳೊಂದಿಗೆ ಬದುಕು ಆರಂಭಿಸಿದರು. ಇವರು

ಓದು ಬರಹ ಅರಿಯದ ಒಬ್ಬ ಸಾಮಾನ್ಯ ವ್ಯಕ್ತಿ. ಅಡಿಕೆ ಹಾಗೂ ತೆಂಗಿನಕಾಯಿ ಕೊಯ್ಯುವ ವೃತ್ತಿ ಮಾಡುತ್ತಾ ಜೀವನ ನಡೆಸುತ್ತಿದ್ದರು. ಇವರ ಮನೆ ಹಾಗೂ ಜಮೀನು ಇರುವುದು ಎತ್ತರದ ಗುಡ್ಡದ ಮೇಲೆ. ತುಂಬಾ ಇಳಿಜಾರಾದ ಆ ಬೆಟ್ಟದ ತುದಿಯಲ್ಲಿ ಕುಡಿಯಲು ಕೂಡಾ ನೀರಿರಲಿಲ್ಲ. ಬಾವಿ ತೋಡಿದರೂ ನೀರು ಸಿಗುವ ಸಾಧ್ಯತೆ ಇರಲಿಲ್ಲ. ಇಂತಹ ಸ್ಥಳಕ್ಕೆ ಬಂದು ನಾಲ್ಕು ಕಂಬದ ಒಂದು ಸಣ್ಣ ಗುಡಿಸಲು ಕಟ್ಟಿ ವಾಸಮಾಡಲು ಆರಂಭಿಸಿದರು. ದಿನನಿತ್ಯದ ಅಗತ್ಯಕ್ಕಾಗಿಯೂ ಗುಡ್ಡದ ಕೆಳಗೆ ಇದ್ದ ಬಾವಿಯನ್ನೇ ಆಶ್ರಯಿಸಿದ್ದ ಇವರು ಅಲ್ಲಿಂದ ನೀರನ್ನು ಹೊತ್ತು ತರುತ್ತಿದ್ದರು. ಕೇವಲ ಮುಳಿಹುಲ್ಲು ಮಾತ್ರ ಬೆಳೆಯುತ್ತಿದ್ದ ಆ ಬರಡು ಭೂಮಿಯನ್ನು ನಾಯ್ಕರು ಸುಂದರವಾದ ಕೃಷಿ ತೋಟವಾಗಿ ಮಾಡಿರುವುದಾದರೂ ಹೇಗೆ? ಕೃಷಿಗೆ ಅಗತ್ಯವಾದ ನೀರನ್ನು ಪಡೆದುದು ಎಲ್ಲಿಂದ? ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ.



ಇವರ ಜಮೀನು ಇರುವುದು ಎತ್ತರದ ಗುಡ್ಡದ ಮೇಲೆ. ಇಳಿಜಾರು ಪ್ರದೇಶವಾದುದರಿಂದ ನೆಲವನ್ನು ಸಮತಟ್ಟು ಮಾಡದೆ ಕೃಷಿ ಮಾಡುವುದು ಅಸಾಧ್ಯವಾಗಿತ್ತು. ತನ್ನ ನಿತ್ಯ ಕಾಯಕದ ಜೊತೆಗೆ ಬಿಡುವಿನ ವೇಳೆಯಲ್ಲಿ ಮಣ್ಣನ್ನು ಸ್ವಲ್ಪ ಸ್ವಲ್ಪವೇ ಅಗೆದು ಹರಡುತ್ತಾ ಬಂದರು. ಸಹಾಯಕ್ಕೆ ಯಾರೂ ಇರಲಿಲ್ಲ. ಮಣ್ಣಿನ ಬುಟ್ಟಿಯನ್ನು ಮೊಣಕಾಲಲ್ಲಿ ಇಟ್ಟುಕೊಂಡು ಸಾಗಿಸುತ್ತಿದ್ದರು. ಇಳಿಜಾರಾದ ಭೂಮಿಯನ್ನು ಇವರು ಒಟ್ಟು ಐದು ತಟ್ಟುಗಳಾಗಿ ಮಾಡಿದ್ದಾರೆ. ಮಳೆಗಾಲದಲ್ಲಿ ಮಣ್ಣು ಕೊಚ್ಚಿ ಹೋಗದಂತೆ ಕಟ್ಟಹುಣಿ (ಕಲ್ಲಿನ ಗೋಡೆ) ಕಟ್ಟಿದ್ದಾರೆ.

ಪ್ರತಿದಿನ ಕೆಲಸ ಮುಗಿಸಿ ಆಯಾಸಗೊಂಡು ಗುಡ್ಡಹತ್ತಿ ಮನೆಗೆ ಬರುವಾಗಲೂ ತಲೆಯ ಮೇಲೆ ಒಂದೊಂದೇ ಕಲ್ಲನ್ನು ಹೊತ್ತು ತರುತ್ತಿದ್ದರು. ದಿನಕ್ಕೆ ಎರಡು ಕಲ್ಲಿನಂತೆ ತಂದು ಸ್ವಲ್ಪ ಸ್ವಲ್ಪವೇ ಕಟ್ಟಹುಣಿ ಕೆಲಸ ಮಾಡುತ್ತಿದ್ದರು. ಹೀಗೆ ಕಟ್ಟಿದ ಕಲ್ಲಿನ ಗೋಡೆಗಳ ಒಟ್ಟು ಉದ್ದ ಎಷ್ಟು ಗೊತ್ತೇ? ಅಂದಾಜು 250 ಮೀಟರ್! ಇದಕ್ಕಾಗಿ ಅವರು ಬೆಟ್ಟಕ್ಕೆ ಹೊತ್ತು ತಂದ ಕಲ್ಲುಗಳ ಸಂಖ್ಯೆ ಸಾವಿರ ದಾಟಬಹುದು!

ನೆಲವು ಸಮತಟ್ಟಾಯಿತು. ಆದರೆ ನೀರಿಗಾಗಿ ಏನು ಮಾಡಬಹುದು? ಎಂದು ಯೋಚಿಸುತ್ತಾ ಹೋದಾಗ ಇವರಿಗೆ ಹೊಳೆದದ್ದು 'ಸುರಂಗ' ಕೊರೆಯುವ ಯೋಚನೆ. ಈ ಕೆಲಸಕ್ಕೂ ಸಹಾಯ ಮಾಡುವವರು ಬೇರೆ ಯಾರೂ ಇರಲಿಲ್ಲ. ತನ್ನದೇ ಸಮಯವನ್ನು ಹೊಂದಿಸಿಕೊಂಡು ಸುರಂಗದ ಕೆಲಸವನ್ನು ಆರಂಭಿಸಿದ ಇವರು ಬಿಡುವಿದ್ದಾಗಲೆಲ್ಲ ಇದೇ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಮಧ್ಯರಾತ್ರಿವರೆಗೂ ದಣಿವಿಲ್ಲದೆ ದುಡಿದರೂ ಬೆಳಗ್ಗೆ ಕೆಲಸಕ್ಕಾಗಿ ಗುಡ್ಡ ಇಳಿಯುವ ಮೊದಲು ಒಂದೆರಡು ಗಂಟೆ ಸುರಂಗದ ಮಣ್ಣನ್ನು ಅಗೆದಿಟ್ಟು ಹೋಗುವುದೂ ಇತ್ತು. ಸುರಂಗ ಉದ್ದವಾಗುತ್ತಾ ಹೋದಂತೆ ಕೆಲಸ ತುಂಬಾ ನಿಧಾನವಾಗುತ್ತಿತ್ತು. ಮಣ್ಣು ಹೆಚ್ಚು ಗಟ್ಟಿಯಾದರೆ ಕೆಲಸ ಮತ್ತಷ್ಟು ಕಠಿಣವಾಗುತ್ತಿತ್ತು. ಹೀಗೆ ವರ್ಷವಿಡೀ ಶ್ರಮಪಟ್ಟು ಕೊರೆದ ಸುರಂಗದಲ್ಲಿ ನೀರು ಸಿಗಲೇ ಇಲ್ಲ! ಎದೆಗುಂದದ ಅವರು ಮತ್ತೆ ಬೇರೆ ಬೇರೆ ಸುರಂಗಗಳನ್ನು ಮಾಡುತ್ತಾ ಹೋದರು. ಅಲ್ಲಿಗೆ ಅವರು ಮಾಡಿದ ಸುರಂಗಗಳ ಸಂಖ್ಯೆ ನಾಲ್ಕು ಆಯಿತು. ಅಷ್ಟೂ ಸುರಂಗಗಳಲ್ಲಿ ಕುಡಿಯಲು ಸಹ ನೀರು ಸಿಗಲಿಲ್ಲ. ಈ ಕಾರಣಕ್ಕಾಗಿ ಊರವರ ಟೀಕೆಗಳನ್ನೂ ಕೇಳಿಸಿಕೊಳ್ಳಬೇಕಾಯಿತು. ತನ್ನ ಮನಸ್ಸಿಗೆ ಆದ ನೋವನ್ನು ಹಠವಾಗಿಸಿ ಉತ್ಸಾಹದಿಂದ, ವೇಗದಿಂದ ಕೊರೆದ ಐದನೇ ಸುರಂಗದಲ್ಲಿ ಜೀವ ಜಲ ಕಾಣಿಸಿತು! ಇದು ಅವರ ಜೀವನದ ಅತಿ ದೊಡ್ಡ ತಿರುವಾಯಿತು. ಸುಮಾರು 125 ಕೋಲು ಉದ್ದದ ಈ ಸುರಂಗದ ನೀರನ್ನೇ ನಂಬಿದ ಇವರು ತಾನು ಮಾಡಿದ ತಟ್ಟುಗಳಲ್ಲಿ ಅಡಿಕೆ ಹಾಗೂ ತೆಂಗಿನ ಗಿಡ ನೆಟ್ಟು ತೋಟ ಮಾಡಿದರು. ಸುರಂಗ ನಿರ್ಮಾಣ ಕಾರ್ಯ ಅಲ್ಲಿಗೆ ನಿಲ್ಲಲಿಲ್ಲ. ನಂತರ ಇನ್ನೂ ಎರಡು ಸುರಂಗಗಳನ್ನು ನಿರ್ಮಿಸಿ ಅದರಲ್ಲೂ ಯಶಸ್ವಿಯಾದರು.



ಸುರಂಗಗಳ ನೀರನ್ನು ಅಲ್ಲಲ್ಲಿ ಮಣ್ಣಿನ ಕೊಳಗಳಲ್ಲೂ, ಟಾಂಕಿಗಳಲ್ಲೂ ಸಂಗ್ರಹಿಸಿ ಯಾವುದೇ ಪಂಪಿನ ಸಹಾಯ ಇಲ್ಲದೆ ಕೆಳತಟ್ಟುಗಳಿಗೆ ಸ್ಪ್ರಿಂಕ್ಲರ್ ಮೂಲಕ ಹರಿಸುತ್ತಾರೆ. ಬೆಟ್ಟದ ತಪ್ಪಲಿನ ಬಂಜರು ಭೂಮಿ ಈಗ ಅಡಿಕೆ, ತೆಂಗು, ಬಾಳೆ, ಗೇರು, ಹಲಸು ಹಾಗೂ ಕರಿಮೆಣಸು ಬೆಳೆಗಳಿಂದ ಸಮೃದ್ಧವಾಗಿದೆ. ಇವರು ದನ ಸಾಕಣೆ ಮಾಡುತ್ತಿದ್ದು, ಅಗತ್ಯದ ತರಕಾರಿಗಳನ್ನೂ ಬೆಳೆಸುತ್ತಿದ್ದಾರೆ. ತೋಟಕ್ಕೆ ಹಟ್ಟಿಗೊಬ್ಬರ ಹಾಗೂ ಸುಡುಮಣ್ಣನ್ನು ಬಳಸುತ್ತಿದ್ದಾರೆ. ಕಂಪೋಸ್ಟ್ ಗೊಬ್ಬರವನ್ನೂ ತಯಾರಿಸುತ್ತಾರೆ.

ತನ್ನ ಸ್ವಾವಲಂಬಿ ಬದುಕಿನಲ್ಲಿ ಇಷ್ಟೆಲ್ಲಾ ಯಶಸ್ಸು ಕಂಡ ಮಹಾಲಿಂಗ ನಾಯ್ಕರು ಶಾಲೆಗೆ ಹೋದವರಲ್ಲ. ಹಾಗೆಂದು ಕೃಷಿಯ ಹೊಸ ಹೊಸ ಉಪಾಯಗಳನ್ನು ಕಲಿಯುವುದರಲ್ಲೂ, ಅದನ್ನು ಅಳವಡಿಸುವುದರಲ್ಲೂ ಅವರು ಯಾವಾಗಲೂ ಮುಂದಿರುತ್ತಾರೆ. ಮಳೆನೀರನ್ನು ಭೂಮಿಗೆ ಇಂಗಿಸುವ 'ಮಳೆಕೊಯ್ಲು' ವಿಧಾನವನ್ನೂ ಅವರು ಅನುಷ್ಠಾನಕ್ಕೆ ತಂದಿದ್ದಾರೆ. ತನ್ನ ಜಮೀನಿನ ಸಮೀಪದಲ್ಲಿರುವ ಸರಕಾರಿ ಜಾಗದಲ್ಲಿ ಸುಮಾರು ಮುನ್ನೂರರಷ್ಟು ಇಂಗುಗುಂಡಿಗಳನ್ನು ನಿರ್ಮಿಸಿ ಮಳೆನೀರು ಭೂಮಿಗೆ ಇಂಗುವಂತೆ ಮಾಡಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಕಾರ್ಯದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.



ತನ್ನ ಮನೆ, ತೋಟ ಹಾಗೂ ಪರಿಸರವನ್ನು ಸ್ವಚ್ಛವಾಗಿಯೂ,ಓರಣವಾಗಿಯೂ ಇಟ್ಟುಕೊಂಡಿದ್ದಾರೆ. ಜೀವನದಲ್ಲಿ ಎಂತಹ ಕಷ್ಟ, ಟೀಕೆಗಳು ಬಂದರೂ ಉತ್ಸಾಹ ಕಳೆದುಕೊಳ್ಳದೆ ಛಲದಿಂದ ದುಡಿಯುವವರು. ಬಡತನದಲ್ಲೂ ಮನೆಗೆ ಬೇಕಾದ ಮೂಲ ಸೌಕರ್ಯಗಳನ್ನೆಲ್ಲ ಮಾಡಿಕೊಂಡಿದ್ದಾರೆ. ಯಾವುದೇ ದುಶ್ಚಟಗಳಿಲ್ಲ. ಹಾಳು-ಹರಟೆಗಳಾಗಲಿ ಇನ್ನೊಬ್ಬರನ್ನು ನಿಂದಿಸುವುದಾಗಲಿ, ಅತಿ ಆಸೆ ಪಡುವುದಾಗಲಿ ಮಾಡದ ಆದರ್ಶ ಜೀವನ ಇವರದ್ದು.

'ಹಾಸಿಗೆ ಇದ್ದಷ್ಟೇ ಕಾಲು ಚಾಚು' ಎಂಬುವುದು ಇವರ ಜೀವನದ ಯಶಸ್ಸಿನ ಗುಟ್ಟು. ಜೇನು ನೊಣದಂತೆ ಪುಟ್ಟ ಪುಟ್ಟ ಹೆಜ್ಜೆಗಳಿಂದ ಮಾಡಿದ ಈ ದೊಡ್ಡ ಸಾಧನೆಯನ್ನು ಗುರುತಿಸಿದ

ಭಾರತ ಸರಕಾರವು 2022ರಲ್ಲಿ ಶ್ರೀಯುತ ಮಹಾಲಿಂಗ ನಾಯ್ಕರಿಗೆ 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಆಗ ಭಾರತದ ರಾಷ್ಟ್ರಪತಿಯಾಗಿದ್ದ ಶ್ರೀ ರಾಮನಾಥ ಕೋವಿಂದ್ ಅವರಿಂದ ದೆಹಲಿಯಲ್ಲಿ ಈ ಗೌರವವನ್ನು ಸ್ವೀಕರಿಸಿದರು. ಕೃಷಿ ಸಂಸ್ಕೃತಿಯ ಪ್ರತೀಕವಾದ ಮುಟ್ಟಾಳೆಯನ್ನು ಕೆಲಸದ ಸಂದರ್ಭದಲ್ಲಿ ಸದಾ ತನ್ನ ಜೊತೆಗಾರನಂತೆ ಧರಿಸಿಕೊಳ್ಳುವ ಇವರು ಅದನ್ನು ಧರಿಸಿಯೇ ಈ ಪ್ರಶಸ್ತಿಯನ್ನು ಸ್ವೀಕರಿಸಿದ್ದು ವಿಶೇಷವಾಗಿತ್ತು. ಯಾರಿಗೂ ಬೇಡವಾದ ಗುಡ್ಡದ ಮೇಲಿನ ಒಣ ಭೂಮಿಯನ್ನು ಹಸಿರಾಗಿಸಿ ಎಲ್ಲರ ಆಕರ್ಷಣೆಯ ಕೇಂದ್ರವಾಗಿಸಿದ ಇವರ ಏಕವ್ಯಕ್ತಿ ಸಾಧನೆಗೆ ನಾವೆಲ್ಲರೂ ತಲೆಬಾಗಲೇ ಬೇಕು. ಇಂತಹ ಪರಿಸರ ಕಾಳಜಿ, ಕಠಿಣ ಶ್ರಮ ಹಾಗೂ ಛಲದ ಬದುಕು ನಮಗೆಲ್ಲರಿಗೂ ಆದರ್ಶವಾಗಬೇಕಾಗಿದೆ.

**- ಶ್ರೀಪಡ್ರೆ**

## ಲೇಖಕರ ಪರಿಚಯ



'ಹೀಗೊಬ್ಬ ಭಗೀರಥ' ಎಂಬ ಈ ಪಾಠಭಾಗವನ್ನು ಪರಿಸರ ತಜ್ಞರೂ, ಲೇಖಕರೂ ಆಗಿರುವ ಶ್ರೀಪಡ್ರೆ ಅವರು ಬರೆದ 'ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ!' ಎಂಬ ಕೃತಿಯಿಂದ ಆರಿಸಲಾಗಿದೆ. ನೆಲ-ಜಲ ಸಂರಕ್ಷಣೆಯ ಬಗ್ಗೆ ಜನ ಜಾಗೃತಿ ಮೂಡಿಸುತ್ತಿರುವ ಇವರು ತೆರೆ ಮರೆಯಲ್ಲಿ ಆಗುತ್ತಿರುವ ಪರಿಸರ ಕಾಳಜಿ ಕೆಲಸಗಳು ಹಾಗೂ ಕೃಷಿ ವೈವಿಧ್ಯತೆಗಳನ್ನು ಅಂಕಣ ಹಾಗೂ ಪುಸ್ತಕಗಳ ಮೂಲಕ ಹೊರ ಜಗತ್ತಿಗೆ ಪರಿಚಯಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಮಹಾಲಿಂಗ ನಾಯ್ಕರ ಮೌನ ಸಾಧನೆಯನ್ನೂ ತಮ್ಮ ಬರಹದ ಮೂಲಕ ಮೊದಲು ಪರಿಚಯಿಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ. 'ಸ್ಟೇಟ್ ಮನ್ ', 'ಅಶೋಕ ಫೆಲೋ', 'ಶಿವರಾಮ ಕಾರಂತ ಪರಿಸರ ಪ್ರಶಸ್ತಿ' ಹೀಗೆ ಅನೇಕ ಪ್ರಶಸ್ತಿಗಳೂ ಇವರನ್ನು ಅರಸಿ ಬಂದಿವೆ. 19.11.1955ರಂದು ಜನಿಸಿದ ಇವರು ಪ್ರಸ್ತುತ ಕಾಸರಗೋಡು ತಾಲೂಕು ಪಡ್ರೆ ಗ್ರಾಮದಲ್ಲಿ ನೆಲೆಸಿದ್ದಾರೆ.

## ಚಟುವಟಿಕೆಗಳು

### ಪ್ರಶ್ನೆ ತಯಾರಿಸಿರಿ

ಪಾಠಭಾಗದಿಂದ ಸಾಧ್ಯವಾದಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

### ಪತ್ರ ಬರೆಯಿರಿ

ಬರಡು ಭೂಮಿಯಲ್ಲಿ ಒಬ್ಬಂಟಿಯಾಗಿ ದುಡಿದು ಪದ್ಮಶ್ರೀ ಪುರಸ್ಕಾರ ಪಡೆದ ಸಾಧಕ ಅಮೈ ಮಹಾಲಿಂಗ ನಾಯ್ಕರನ್ನು ಅಭಿನಂದಿಸಿ ಪತ್ರವೊಂದನ್ನು ಬರೆಯಿರಿ.

### ಕಿರುಲೇಖನ ಬರೆಯಿರಿ

ಮಹಾಲಿಂಗ ನಾಯ್ಕರ ಭೂಮಿಯು ಬೆಟ್ಟದ ತುದಿಯಲ್ಲಿತ್ತು. ಕುಡಿಯಲು ಕೂಡಾ ನೀರಿರಲಿಲ್ಲ. ಬಾವಿ ತೋಡಿದರೂ ನೀರು ಸಿಗುವ ಸಾಧ್ಯತೆ ಇರಲಿಲ್ಲ. ಇಂತಹ ಸಂದಿಗ್ಧ ಪರಿಸರದಲ್ಲಿ ಸುರಂಗ ತೋಡಿ, ಜಲಸಂರಕ್ಷಣೆ ಮಾಡಿ, ಉತ್ತಮ ಕೃಷಿ ಮಾಡಿದ ಸಾಧನೆಯ ಬಗ್ಗೆ ಓದಿದ್ದೀರಿ. ಈ ವ್ಯಕ್ತಿ ಸಾಧನೆಯನ್ನು ಆಧಾರವಾಗಿರಿಸಿಕೊಂಡು ನಮ್ಮಲ್ಲಿ ಜಲಸಂರಕ್ಷಣೆ ಮಾಡುವ ಸಾಂಪ್ರದಾಯಿಕ ವಿಧಾನಗಳನ್ನು ಪಟ್ಟಿ ಮಾಡಿ ಯಾವುದಾದರೂ ಒಂದು ವಿಧಾನದ ಕುರಿತು ಕಿರುಲೇಖನ ಬರೆಯಿರಿ.

### ವ್ಯಕ್ತಿ ಪರಿಚಯ ಬರೆಯಿರಿ

| | | |
|---|---|---|
| ಹೆಸರು | : | ಸತ್ಯನಾರಾಯಣ ಬೆಳೇರಿ |
| ಸ್ಥಳ | : | ನೆಟ್ಟಣಿಗೆ ಗ್ರಾಮದ ಬೆಳೇರಿ, ಕಾಸರಗೋಡು ಜಿಲ್ಲೆ |
| ಜನನ | : | 15-06-1973 |
| ತಂದೆ | : | ಕುಞ್ಞಿರಾಮ ಮಣಿಯಾಣಿ |
| ತಾಯಿ | : | ಜಾನಕಿ |
| ಪತ್ನಿ | : | ಜಯಶ್ರೀ |
| ವಿದ್ಯಾಭ್ಯಾಸ | : | ದ್ವಿತೀಯ ಪಿ.ಯು.ಸಿ. |
| ಹವ್ಯಾಸ | : | ಬೆಳೆಗಳ ವಿವಿಧ ತಳಿಗಳ ಸಂಗ್ರಹ, ಗಿಡಗಳಿಗೆ ಕಸಿಕಟ್ಟುವುದು, ಜೇನುಸಾಕಣೆ, ಪತ್ರಿಕೆಗಳಿಗೆ ಲೇಖನ, ವ್ಯಂಗ್ಯಚಿತ್ರ ರಚನೆ,ಕವಿತಾ ರಚನೆ ಇತ್ಯಾದಿ. |

| | | |
|---|---|---|
| ಸಾಧನೆ | : | ದೇಶವಿದೇಶಗಳಲ್ಲಿ ಬೆಳೆಯುವ ಸುಮಾರು 650 ವಿಧದ ಭತ್ತದ ತಳಿಗಳು ಮಾತ್ರವಲ್ಲದೆ, ವಿವಿಧ ಬಗೆಯ ಹಣ್ಣುಹಂಪಲು, ಗೆಡ್ಡೆಗೆಣಸು ಹಾಗೂ ಔಷಧೀಯ ತಳಿಗಳ ಸಂರಕ್ಷಣೆ ಮಾಡಿ 'ತಳಿ ಸಂರಕ್ಷಕ' ಎಂಬ ಖ್ಯಾತಿ. |
| ಪ್ರಶಸ್ತಿ | : | ಕೃಷಿ ಕ್ಷೇತ್ರದ ಉತ್ಕೃಷ್ಟ ಸಾಧನೆಗಾಗಿ ಭಾರತ ಸರಕಾರದ ಪದ್ಮಶ್ರೀ ಪ್ರಶಸ್ತಿ, ಕೃಷಿ ಇಲಾಖೆ ನೀಡುವ 'ಸಸ್ಯತಳಿ ಸಂರಕ್ಷಕ' ರಾಷ್ಟ್ರ ಪ್ರಶಸ್ತಿ, ಗಡಿನಾಡ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕೇರಳ 'ವನಮಿತ್ರ' ಪ್ರಶಸ್ತಿ ಇತ್ಯಾದಿ. |

## ಸಂದರ್ಶನ ವರದಿ

ನಿಮ್ಮೂರಿನಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಿದ ವ್ಯಕ್ತಿಯೊಬ್ಬರ ಸಂದರ್ಶನ ನಡೆಸಿ, ಅದರ ಆಧಾರದಲ್ಲಿ ಒಂದು ಸಂದರ್ಶನ ವರದಿಯನ್ನು ಬರೆಯಿರಿ.

## ಕ್ರಮೀಕರಿಸಿ ಬರೆಯಿರಿ

ಕೆಳಗೆ ನೀಡಲಾದ ವಾಕ್ಯದಲ್ಲಿರುವ ಪದಗಳನ್ನು ಕ್ರಮೀಕರಿಸಿ ಅರ್ಥಪೂರ್ಣ ವಾಕ್ಯಗಳಾಗಿ ಬರೆಯಿರಿ.

- ಗುಡ್ಡದ ಇವರ ಮೇಲೆ ಎತ್ತರದ ಇರುವುದು ಜಮೀನು.
- ನೀರು ಕೊರೆದ ಇಲ್ಲ ಶ್ರಮಪಟ್ಟು ಸಿಗಲೇ ವರ್ಷವಿಡೀ ಸುರಂಗದಲ್ಲಿ.
- ಪಡೆದದ್ದು ಕೃಷಿಗೆ ನೀರನ್ನು ಎಲ್ಲಿಂದ ಅಗತ್ಯವಾದ?

## ಅನ್ಯದೇಶೀಯ ಪದಗಳು

ಕಾರು, ಪೆನ್ನು, ಲೈಟು ಇಂತಹ ಪದಗಳನ್ನು ನಾವು ಸಾಮಾನ್ಯವಾಗಿ ಬಳಸುತ್ತಿರುತ್ತೇವೆ ಅಲ್ಲವೇ? ನಿತ್ಯ ಬಳಕೆಯಲ್ಲಿರುವ ಇಂತಹ ಕನ್ನಡೇತರ ಪದಗಳು 'ಅನ್ಯದೇಶೀಯ ಪದಗಳು' ಎಂದು ಕರೆಯಲ್ಪಡುತ್ತವೆ. ಈ ಪಾಠಭಾಗದಲ್ಲಿ ಬಂದಿರುವ ಇಂತಹ ಪದಗಳನ್ನು ಬರೆಯಿರಿ.

## ಶುದ್ಧರೂಪ ಬರೆಯಿರಿ

ಕೆಳಗೆ ನೀಡಲಾದ ಪದಗಳಲ್ಲಿರುವ ತಪ್ಪುಗಳನ್ನು ಸರಿಪಡಿಸಿ ಅವುಗಳ ಶುದ್ಧರೂಪವನ್ನು ಬರೆಯಿರಿ.

- ಸಾದ್ಯತೆ
- ಇಲಿಜರು
- ಮದ್ಯರಾರ್ತಿ
- ಮಲೆನಿರು
- ಸೌರ್ಕಯ

## ಸಮಾನಾರ್ಥಕ ಪದ

ಅಡಿಗೆರೆ ಎಳೆದ ಪದದ ಸಮಾನಾರ್ಥಕ ಪದವನ್ನು ಆರಿಸಿ ವಾಕ್ಯವನ್ನು ಸರಿಪಡಿಸಿ ಬರೆಯಿರಿ.

[ಉಪಯೋಗ, ಕಷ್ಟ, ಹತ್ತಿರ, ಜಲ, ಕೆಲಸ, ವೇದನೆ]

- ಕೆಲಸ ಮತ್ತಷ್ಟು ಕಠಿಣವಾಗುತ್ತಾ ಸಾಗುತ್ತಿತ್ತು.
- ಮನಸ್ಸಿಗೆ ಆದ ನೋವನ್ನು ಹಠವಾಗಿಸಿದರು.
- ತೋಟಕ್ಕೆ ಹಟ್ಟಿಗೊಬ್ಬರ ಹಾಗೂ ಸುಡುಮಣ್ಣನ್ನು ಬಳಸುತ್ತಿದ್ದಾರೆ.
- ಜಮೀನಿನ ಸಮೀಪದಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸಿದರು.
- ಅಡಿಕೆ ಕೊಯ್ಯುವ ವೃತ್ತಿ ಮಾಡುತ್ತಿದ್ದರು.
- ಸುರಂಗದಲ್ಲಿ ನೀರು ಸಿಗಲೇ ಇಲ್ಲ.

## ವಾಕ್ಯ ಬದಲಾಯಿಸಿ ಬರೆಯಿರಿ

ಅಡಿಗೆರೆ ಎಳೆದ ಪದದ ಬದಲು 'ನಾನು' ಎಂಬ ಪದವನ್ನು ಬಳಸಿ ವಾಕ್ಯವನ್ನು ಬದಲಾಯಿಸಿರಿ.

- ಮಹಾಲಿಂಗ ನಾಯ್ಕರು ಬರಡು ಭೂಮಿಯಲ್ಲಿ ಬಂಗಾರದಂತಹ ಬೆಳೆ ಪಡೆದವರು.
- ಅವರು ಬಡತನದಲ್ಲಿ ಹುಟ್ಟಿ ಬೆಳೆದವರು.
- ಇವರು ಉತ್ಸಾಹ ಕಳೆದುಕೊಳ್ಳದೆ ಛಲದಿಂದ ದುಡಿಯುವವರು.
- ಇವರು ಗುಡಿಸಲು ಕಟ್ಟಿ ವಾಸಮಾಡಲು ಆರಂಭಿಸಿದ್ದರು.
- ಅವರು ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡಿದ್ದಾರೆ.
- ಇವರು ರಾಷ್ಟ್ರಪತಿಗಳಿಂದ ಗೌರವವನ್ನು ಸ್ವೀಕರಿಸಿದರು.

# ದುಡಿಮೆ

ಸಿಪ್ಪೆಯ ಸುಲಿದು ತೆಗೆದರೆ ಮಾತ್ರ
ಹಣ್ಣಿನ ತಿರುಳನು ಮೆಲಬಹುದು;
ತೆಂಗನ ಕಾಯಿಯ ಚಿಪ್ಪನು ಒಡೆದರೆ
ಕೊಬ್ಬರಿ ತಿಳಲನು ತಿನಬಹುದು.





ಅಕ್ಕಿಯ ಸುಡುಸುಡು ನೀರೊಳು ಕುದಿಸಲು
ಗಮ ಗಮ ಅನ್ನವನುಣಬಹುದು;
ಅರಿವೆಯ ತಂದು ರಾಟಿಗೆ ಹೊಲಿದರೆ
ಚಂದದ ಅಂಗಿಯ ತೊಡಬಹುದು.



ಅಕ್ಷರ ಓದಲು ಬರೆಯಲು ಕಲಿತರೆ
ಕವಿತಾ, ಕಥೆಗಳು ತಿಳಿಯುವವು;
ದಿನವೂ ತಪ್ಪದೆ ಶಾಲೆಗೆ ಹೋದರೆ
ಪ್ರಶ್ನೆಗೆ ಉತ್ತರ ಹೊಳೆಯುವವು.



ದಿನ ದಿನ ಹೂವಿನ ಬಂಡನು ಹೀರಲು
ಜೇನು ತುಪ್ಪ ಕೊಡ ತುಂಬುವುದು;
ಹನಿ ಹನಿ ಸೆಳಕಿನ ಮಳೆ ಸುರಿದಾಗಲೆ
ಹಳ್ಳ,ಬಾವಿ, ಕೆರೆ ತುಳುಕುವವು.



ಎಲ್ಲರು ತಮ್ಮಯ ಕೆಲಸವ ತಾವೇ
ಮಾಡಲು ದೇಶವು ಬೆಳೆಯುವುದು;
ದುಡಿದರೆ ಮಾತ್ರವೆ ದೊಡ್ಡವನಾಗುವೆ
ಸ್ವಾತಂತ್ರ್ಯದ ಸವಿ ತಿಳಿಯುವುದು.

- ಚೆನ್ನವೀರ ಕಣವಿ

## ಕವಿ ಪರಿಚಯ



ಕನ್ನಡದ ವಿದ್ವಾಂಸರು ಹಾಗೂ ಹೊಸಗನ್ನಡ ಕಾವ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾಗಿದ್ದ ಚೆನ್ನವೀರ ಕಣವಿಯವರು ಕರ್ನಾಟಕದ ಧಾರವಾಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. 1928 ಜೂನ್ 28ರಂದು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ಸಕ್ಕರೆಪ್ಪ ಮತ್ತು ಪಾರ್ವತವ್ವ ದಂಪತಿಗಳ ಮಗನಾಗಿ ಜನಿಸಿದರು. ಇವರ ಪತ್ನಿ ಶಾಂತಾದೇವಿ. ಆಕಾಶಬುಟ್ಟಿ, ಭಾವಜೀವಿ, ಕಾವ್ಯಾಕ್ಷಿ, ದಾರಿದೀಪ, ನೆಲಮುಗಿಲು, ಎರಡು ದಡ ಮೊದಲಾದ ಕಾವ್ಯ ಸಂಕಲನಗಳನ್ನೂ, ಮಕ್ಕಳ ಕವಿತೆಗಳು, ವಿಮರ್ಶಾ ಲೇಖನಗಳು ಹಾಗೂ ಪ್ರಬಂಧ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಇವರು ರಚಿಸಿದ 'ಜೀವಧ್ವನಿ' ಕವನ ಸಂಕಲನ ಕೃತಿಗೆ 1981ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಅದು ಮಾತ್ರವಲ್ಲದೆ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಕವಿರತ್ನ ಪ್ರಶಸ್ತಿ ಹಾಗೂ ಗೌರವ ಡಾಕ್ಟರೇಟನ್ನು ಕೂಡ ಮುಡಿಗೇರಿಸಿಕೊಂಡಿದ್ದಾರೆ. ಇವರು 16.2.2022ರಂದು ತಮ್ಮ 93ನೇ ವಯಸ್ಸಿನಲ್ಲಿ ನಿಧನರಾದರು.

## ಚಟುವಟಿಕೆಗಳು

### ಹಾಡಿರಿ

'ದುಡಿಮೆ' ಪದ್ಯವನ್ನು ರಾಗ, ತಾಳ, ಲಯ ಬದ್ಧವಾಗಿ ಹಾಡಿರಿ.

### ಆಶಯ ಬರೆಯಿರಿ

'ದುಡಿಮೆ' ಪದ್ಯದ ಆಶಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

### ವಿಶೇಷಾರ್ಥ ಬರೆಯಿರಿ

ಈ ಕೆಳಗಿನ ಪದ್ಯದ ವಿಶೇಷಾರ್ಥವನ್ನು ಬರೆಯಿರಿ.

ಸಿಪ್ಪೆಯ ಸುಲಿದು ತೆಗೆದರೆ ಮಾತ್ರ
ಹಣ್ಣಿನ ತಿರುಳನು ಮೆಲಬಹುದು;
ತೆಂಗನ ಕಾಯಿಯ ಚಿಪ್ಪನು ಒಡೆದರೆ
ಕೊಬ್ಬರಿ ತಿಳಲನು ತಿನಬಹುದು.

## ಸಂದೇಶ ಬರೆಯಿರಿ

ಈ ಕೆಳಗಿನ ಸಾಲುಗಳು ನೀಡುವ ಸಂದೇಶವನ್ನು ಬರೆಯಿರಿ.

ಎಲ್ಲರು ತಮ್ಮಯ ಕೆಲಸವ ತಾವೇ
ಮಾಡಲು ದೇಶವು ಬೆಳೆಯುವುದು;
ದುಡಿದರೆ ಮಾತ್ರವೆ ದೊಡ್ಡವನಾಗುವೆ
ಸ್ವಾತಂತ್ರ್ಯದ ಸವಿ ತಿಳಿಯುವುದು.

## ಪ್ರಾಸಪದಗಳನ್ನು ಗುರುತಿಸಿರಿ

ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಹುಡುಕಿ ಬರೆಯಿರಿ.

## ಪದಗಳನ್ನು ರಚಿಸಿರಿ

ಕೆಳಗೆ ನೀಡಲಾದ ಅಕ್ಷರಗಳನ್ನು ಬಳಸಿಕೊಂಡು ಅರ್ಥಪೂರ್ಣವಾದ ಪದಗಳನ್ನು ರಚಿಸಿರಿ.

ಉದಾ: ರಾಟೆ

| | | | | | | |
|---|---|---|---|---|---|---|
| ಉ | ಜೀ | ನ | ಕೆ | ರ | ತ್ತಿ | ಣ |
| ವ | ವಿ | ಸಂ | ಯಂ | ಕೊ | ಲಿ | ಟೆ |
| ಹ | ತ್ರ | ಸ | ದ್ಯು | ಲ | ಡ | ಚ |
| ರಾ | ಕ | ತ್ | ಟ | ವ್ಯಾ | ಬ | ಳ |
| ಪ | ವಾ | ಪಾ | ಗ | ತ | ದ | ಕೌ |

# ಬದುಕಿನ ತುಡಿತ

ಸಾವಿತ್ರಿ ತನ್ನ ಇಬ್ಬರು ಮಕ್ಕಳ ಜೊತೆ ವಾಸಿಸುತ್ತಿದ್ದಳು. ಮನೆಯಲ್ಲಿ ತುಂಬ ಬಡತನ. ದಿನವೂ ಕಾಡಿಗೆ ಹೋಗಿ ಒಂದಿಷ್ಟು ಬಿದಿರು ಮತ್ತು ಜೊಂಡು ಹುಲ್ಲು ತಂದು ಮಾರಾಟ ಮಾಡಿ ಜೀವನ ನಡೆಸುತ್ತಿದ್ದಳು. ಒಂದು ದಿನ ಅವಳು ಕಾಡಿನಿಂದ ಬಿದಿರಿನ ಹೊರೆ ಹೊತ್ತು ಬರುತ್ತಿದ್ದಳು. ಅವಳ ಇಬ್ಬರು ಮಕ್ಕಳು ತಲೆಯ ಮೇಲೆ ಜೊಂಡುಹುಲ್ಲಿನ ಹೊರೆ ಹೊತ್ತು ಅವಳ ಹಿಂದೆಯೇ ನಡೆಯುತ್ತಿದ್ದರು.

ದಾರಿಯಲ್ಲಿ ಬುದ್ಧಿವಂತ ವ್ಯಾಪಾರಿಯೊಬ್ಬ ಎದುರಾದ. ಸಾವಿತ್ರಿ ಅವನಲ್ಲಿ ತನ್ನ ಕಷ್ಟವನ್ನು ಹೇಳಿಕೊಂಡಳು. "ಜೀವನ ನಡೆಸುವುದು ತುಂಬ ಕಷ್ಟವಾಗಿದೆ, ನನಗೆ ಏನಾದರೂ ಸಹಾಯ ಮಾಡಿ" ಎಂದು ಗೋಗರೆದಳು. ವ್ಯಾಪಾರಿಗೆ ಅವಳ ಪರಿಚಯವಿತ್ತು. ತನ್ನ ಇಬ್ಬರು ಮಕ್ಕಳ ಜೊತೆ ಅವಳು ಕಷ್ಟಪಟ್ಟು ಕೆಲಸ ಮಾಡುತ್ತಿದ್ದುದನ್ನು ಅವನು ಕಂಡಿದ್ದ. ವಿಧವೆಯಾದ ಇವಳಿಗೆ ಏನಾದರೂ ಸಹಾಯ ಮಾಡಬೇಕು ಎಂದು ಅವನಿಗನ್ನಿಸಿತು.



"ಚಿಂತಿಸಬೇಡ. ನಿನ್ನ ಈ ಇಬ್ಬರು ಮಕ್ಕಳನ್ನುನನ್ನಜೊತೆ ಕಳುಹಿಸು. ಅವರಿಗೆ ತಿಂಡಿ,ಊಟ ಕೊಡುತ್ತೇನೆ. ಏನಾದರೂ ಕೆಲಸವನ್ನೂ ಕಲಿಸುತ್ತೇನೆ. ಮೂರು ತಿಂಗಳು ಅವರು ನನ್ನ ಮನೆಯಲ್ಲಿರಲಿ. ಮತ್ತೆಅವರನ್ನುನಿನ್ನಬಳಿಗೆಕಳುಹಿಸುತ್ತೇನೆ. ನಿನ್ನ ವೃದ್ಧಾಪ್ಯದ ದಿನಗಳಲ್ಲಿ ಮಕ್ಕಳು ನಿನಗೆ ಸಹಾಯಕರಾಗಿರುತ್ತಾರೆ" ಎಂದು ಹೇಳಿದ.

ಸಾವಿತ್ರಿ ಒಪ್ಪಿದಳು. ಮೂರು ತಿಂಗಳು ತನ್ನ ಇಬ್ಬರು ಮಕ್ಕಳಿಗೆ ಊಟ-ತಿಂಡಿ ಸಿಕ್ಕುತ್ತದೆ ಎಂಬ ಸಂತೋಷ ಅವಳಿಗೆ. ವ್ಯಾಪಾರಿ ಹುಡುಗರನ್ನು ತನ್ನ ಮನೆಗೆ ಕರೆದುಕೊಂಡು ಹೋದ.

ದೊಡ್ಡ ಹುಡುಗನಿಗೆ ಬಿದಿರಿನಿಂದ ಬುಟ್ಟಿ ಹೆಣೆಯುವುದನ್ನು ಕಲಿಸಿದ. ಚಿಕ್ಕ ಹುಡುಗನಿಗೆ ಜೊಂಡು ಹುಲ್ಲಿನಿಂದ ಟೋಪಿ, ಬೊಂಬೆ ಇತ್ಯಾದಿ ಮಾಡುವುದನ್ನು ಕಲಿಸಿದ. ಹುಡುಗರು ಬುದ್ಧಿವಂತರು, ಮೂರು ತಿಂಗಳಿನಲ್ಲಿ ಕೆಲಸದಲ್ಲಿ ಪ್ರವೀಣರಾದರು. ಅವರ ಬುಟ್ಟಿ ಮತ್ತು ಟೋಪಿ ಗಳು ತುಂಬ ಸುಂದರವಾಗಿದ್ದು, ಜನರನ್ನುಬಹುಬೇಗ ಆಕರ್ಷಿಸುತ್ತಿದ್ದವು.

ವ್ಯಾಪಾರಿ ಹುಡುಗರನ್ನು ಮತ್ತೆ ಅವರ ತಾಯಿಯ ಬಳಿಗೆ ಕರೆದುಕೊಂಡು ಬಂದು, "ಇನ್ನು ನೀನು ಚಿಂತಿಸುವ ಅಗತ್ಯವಿಲ್ಲ. ಹುಡುಗರು ಬುದ್ಧಿವಂತರು. ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ" ಎಂದು ಹೇಳಿ ಹೊರಟುಹೋದ.

ಈಗ ಹುಡುಗರು ಕಾಡಿನಿಂದ ಬಿದಿರು, ಜೊಂಡುಹುಲ್ಲು ತಂದು ಬುಟ್ಟಿ ಹೆಣೆದರಲ್ಲದೆ ಟೋಪಿ, ಬೊಂಬೆಗಳನ್ನೂ ಮಾಡಿದರು. ಅದಕ್ಕೆ ಬಣ್ಣದಿಂದ ಚಿತ್ತಾರ ಮಾಡಿದರು. ಜನರು

## ಕಸುಬು

ಅನಾದಿ ಕಾಲದಿ ತರತರ ವೃತ್ತಿಯ
ನಡೆಸುತ ಬಂದರು ಹಳ್ಳಿಗರು |
ತರತರ ಕಸುಬನು ಮಾಡುತ ಅವರು
ಸ್ನೇಹದಿ ಜೀವನ ಸವೆಸಿದರು ||

ರೈತರು ಹೊಲದಲಿ ದುಡಿಯುತ ತಾವು
ಮಣ್ಣಲಿ ಹೊನ್ನನು ಬೆಳೆಸಿದರು |
ಬೆವರನು ಸುರಿಸಿ ರಕುತವ ಹರಿಸಿ
ಲೋಕದ ಹಸಿವನು ನೀಗಿದರು ||

ನೇಕಾರರು ತಾ ನೂಲನು ಮಾಡುತ
ಅಂದದ ಬಟ್ಟೆಯ ಮಾಡಿದರು|
ಚಂದದ ಬಟ್ಟೆಯ ಮಾಡುತ ಅವರು
ಜನರ ಮಾನವ ಕಾಯುವರು ||

ಕುಂಬಾರನು ಮಡಕೆಯ ಕಮ್ಮಾರನು ಕತ್ತಿಯ
ತರತರ ಕಸುಬನು ಮಾಡಿದರು |
ತರತರ ಕಸುಬನು ಮಾಡುತ ಅವರು
ಸ್ನೇಹದಿ ಜೀವನ ಸವೆಸಿದರು ||

**- ಗೀತಾ ಲಕ್ಷ್ಮೀ ಕೆ.**

ಖುಷಿಯಿಂದ ಅವುಗಳನ್ನು ಖರೀದಿಸುತ್ತಿದ್ದರು. ವ್ಯಾಪಾರಿ ಅವರಿಂದ ಹೆಚ್ಚು ಹೆಚ್ಚಾಗಿ ವಸ್ತುಗಳನ್ನು ಖರೀದಿಸಿ ಬೇರೆ ಬೇರೆ ಸ್ಥಳಗಳಲ್ಲಿ ವ್ಯಾಪಾರ ಮಾಡುತ್ತಿದ್ದ.



ಸಾವಿತ್ರಿಯ ಬಳಿ ಹಣ ಸೇರಿತು. ಪುಟ್ಟ ಮನೆಯನ್ನು ಕಟ್ಟಿಕೊಂಡಳು. ಹುಡುಗರಿಗೆ ಮದುವೆ ಮಾಡಿದಳು. ಈಗ ಅವಳ ಸಂಸಾರ ಸುಖವಾಗಿತ್ತು. ಬಡತನ ಅವರನ್ನು ಕಾಡುತ್ತಿರಲಿಲ್ಲ. ತಾಯಿ ಮತ್ತು ಮಕ್ಕಳು ವ್ಯಾಪಾರಿಗೆ ಋಣಿಯಾಗಿದ್ದರು. ಅವನಿಗೆ ತಮ್ಮ ಕೃತಜ್ಞತೆಯನ್ನು ಹೇಳಿದರು. ಅವರ ಬದುಕು ಆನಂದವಾಗಿರುವುದನ್ನು ಕಂಡು ವ್ಯಾಪಾರಿಗೆ ಸಂತೋಷವಾಗಿತ್ತು.

**- ಎಂ.ವಿ. ನಾಗರಾಜ ರಾವ್**

## ಲೇಖಕರ ಪರಿಚಯ



ಕನ್ನಡದ ಬರಹಗಾರರಾದ ಎಂ. ವಿ. ನಾಗರಾಜ ರಾವ್ ಕರ್ನಾಟಕದ ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿಯವರು. ಸುಮಾರು 300ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದು,20ಕ್ಕೂ ಅಧಿಕ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇವರು ರಚಿಸಿದ 'ಕಂಪನ' ಕಾದಂಬರಿಯು ಚಲನಚಿತ್ರವಾಗಿದೆ. ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ ಆಗಿದ್ದ ಇವರು ಶೃಂಗಾರ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ ಸುಮಾರು 242 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೂ ಪಾತ್ರರಾಗಿದ್ದಾರೆ. 'ಬದುಕಿನ ತುಡಿತ' ಎಂಬ ಈ ಕಥೆಯನ್ನು ಇವರು ಬರೆದ '100 ಕಥೆ ನೂರಾರು ನೀತಿ' ಕಥಾ ಸಂಕಲನದಿಂದ ಆರಿಸಲಾಗಿದೆ.

## ಚಟುವಟಿಕೆಗಳು

### ಉತ್ತರ ಬರೆಯಿರಿ

- ಸಾವಿತ್ರಿಗೆ ಜೀವನ ನಿರ್ವಹಣೆ ಕಷ್ಟವಾಗಲು ಕಾರಣವೇನು?
- ಸಾವಿತ್ರಿಯ ಬದುಕು ಸಂಕಷ್ಟದಲ್ಲಿ ಸಿಲುಕಿರುವಾಗ ಸಹಾಯಕ್ಕೆ ಬಂದವರು ಯಾರು?
- ಸಾವಿತ್ರಿಯ ಮಕ್ಕಳು ಯಾವ ಕಸುಬಿನಲ್ಲಿ ಪ್ರವೀಣರಾದರು?
- ಹುಡುಗರು ಬುದ್ಧಿವಂತರೆಂದು ವ್ಯಾಪಾರಿಗೆ ಹೇಗೆ ತಿಳಿಯಿತು?

### ಊಹಿಸಿ ಬರೆಯಿರಿ

- ಸಾವಿತ್ರಿಗೆ ವ್ಯಾಪಾರಿಯ ಸಹಾಯ ಸಿಗದೇ ಇರುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ಬರೆಯಿರಿ.

### ಪ್ರಶ್ನಾವಳಿ ತಯಾರಿಸಿರಿ

- ನಿಮ್ಮ ಊರಿನಲ್ಲಿ ಕುಲಕಸುಬನ್ನೇ ನಂಬಿ ಜೀವನ ನಡೆಸುವವರು ಇರಬಹುದಲ್ಲವೇ? ಅಂತಹ ಒಬ್ಬರನ್ನು ಸಂದರ್ಶನ ನಡೆಸಲು ಸೂಕ್ತವಾದ ಪ್ರಶ್ನಾವಳಿಗಳನ್ನು ರಚಿಸಿರಿ.

### ವಿಚಾರಗೋಷ್ಠಿ ಪ್ರಬಂಧ

'ಬದುಕಿನ ತುಡಿತ' ಮತ್ತು 'ಕಸುಬು' ಪಾಠಭಾಗಗಳಲ್ಲಿ ಪಾರಂಪರಿಕ ವೃತ್ತಿಗಳ ಕುರಿತು ತಿಳಿದುಕೊಂಡಿರುವಿರಿ. ಇಂದಿನ ದಿನಗಳಲ್ಲಿ ನೆಯ್ಗೆ, ಕುಂಬಾರಿಕೆ ಮೊದಲಾದ ಕುಲಕಸುಬುಗಳು ಅವನತಿಯತ್ತ ಸಾಗುತ್ತಿವೆ. 'ನಶಿಸಿ ಹೋಗುತ್ತಿರುವ ಗ್ರಾಮೀಣ ಕುಲಕಸುಬುಗಳು' ಎನ್ನುವ ವಿಚಾರವಾಗಿ ತರಗತಿಯಲ್ಲಿ ನಡೆಯಲಿರುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಒಂದು 'ವಿಚಾರಗೋಷ್ಠಿ ಪ್ರಬಂಧ' ಬರೆಯಿರಿ.

### ಆತ್ಮಕಥೆ ಬರೆಯಿರಿ

- ಬಿದಿರಿನ ಬುಟ್ಟಿಯೊಂದು ತನ್ನ ಆತ್ಮಕಥೆಯನ್ನು ಹೇಳುವುದಾದರೆ ಹೇಗಿರಬಹುದು? ಬರೆಯಿರಿ.

## ಪತ್ರಿಕಾ ವಾರ್ತೆ

- 'ಗ್ರಾಮೀಣ ಕರಕುಶಲ ವಸ್ತುಗಳ ಮಾರಾಟ ಮೇಳ' ನಡೆಯಲಿದೆಯೆಂದು ಭಾವಿಸಿ ಪತ್ರಿಕೆಗೆ ನೀಡಲು ಒಂದು ಪತ್ರಿಕಾ ವಾರ್ತೆ ತಯಾರಿಸಿರಿ.

## ಲೇಖನಚಿಹ್ನೆ ಬಳಸಿ ಬರೆಯಿರಿ

'ಬದುಕಿನ ತುಡಿತ' ಕಥೆಯನ್ನು ಓದಿರುವಿರಲ್ಲವೇ? ಈ ಕಥೆಯಲ್ಲಿ ಸಾಂದರ್ಭಿಕವಾಗಿ ಹಲವು ಚಿಹ್ನೆಗಳು ಬಳಕೆಯಾಗಿರುವುದನ್ನು ನೀವು ಗಮನಿಸಿರಬಹುದು. ಬರವಣಿಗೆಯನ್ನು ಸ್ಪಷ್ಟವಾಗಿ ಹಾಗೂ ಸುಲಭವಾಗಿ ಓದಿ ಅರ್ಥಮಾಡಿಕೊಳ್ಳಲು ಸಹಾಯಕವಾದ ಚಿಹ್ನೆಗಳು 'ಲೇಖನ ಚಿಹ್ನೆಗಳು' ಎಂದು ಕರೆಯಲ್ಪಡುತ್ತವೆ. ಪ್ರಮುಖ ಲೇಖನ ಚಿಹ್ನೆಗಳು ಈ ಕೆಳಗಿನಂತಿವೆ.

| | |
|---|---|
| ಪೂರ್ಣವಿರಾಮ | . |
| ಅಲ್ಪ ವಿರಾಮ | , |
| ಅರ್ಧವಿರಾಮ | ; |
| ಪ್ರಶ್ನಾರ್ಥಕ ಚಿಹ್ನೆ | ? |
| ಭಾವಸೂಚಕ ಚಿಹ್ನೆ | ! |
| ಉದ್ಧರಣ ಚಿಹ್ನೆ | " " |
| ಆವರಣ ಚಿಹ್ನೆ | ( ) |
| ಸಮಾನಾರ್ಥಕ ಚಿಹ್ನೆ | = |

**ಕೆಳಗೆ ನೀಡಲಾದ ಕಥೆಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಸೇರಿಸಿ ಬರೆಯಿರಿ.**

ಒಂದು ದಿನ ನರಿಯೊಂದು ಬಾವಿಯ ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಮೆಚ್ಚಿಕೊಳ್ಳುತ್ತಾ ನಿಂತಿತ್ತು ಆಹಾ ನನ್ನಷ್ಟು ರೂಪವಂತರೇ ಇಲ್ಲ ಎಂದು ಜಂಭಪಡುತ್ತಿದ್ದಾಗ ಕಾಲು ಜಾರಿ ನೀರಿನೊಳಗೆ ಬಿದ್ದು ಹೋಯಿತು ಅದೃಷ್ಟವಶಾತ್ ಬಾವಿಯಲ್ಲಿ ಸ್ವಲ್ಪವೇ ನೀರಿತ್ತು ಈಗ ಹೊರಗೆ ಹೋಗುವುದು ಹೇಗೆ ಎಂದು ನರಿ ಚಿಂತಿಸಿತು ಮೇಲೆ ನೆಗೆಯಲು ಪ್ರಯತ್ನಿಸಿತು ಆದರೆ ಬಾವಿಯಿಂದ ಹೊರಗೆ ಬರಲು ಸಾಧ್ಯವಾಗಲೇ ಇಲ್ಲ

ಆಗ ಮೇಕೆಯೊಂದು ನಮಸ್ಕಾರ ನರಿರಾಯ ಒಳಗೆ ಏನು ಮಾಡುತ್ತಿದ್ದೀಯಾ ಎಂದು ಕೇಳಿತು ನರಿ ತಕ್ಷಣ ಹೇಳಿತು ಇನ್ನು ಸ್ವಲ್ಪ ದಿವಸದಲ್ಲಿ ನೀರಿನ ಕ್ಷಾಮ ಬರುತ್ತದೆಯಂತೆ ಮೇಕೆರಾಯ ಅದಕ್ಕೋಸ್ಕರ ತುಂಬಾ ನೀರನ್ನು ಕುಡಿಯುತ್ತಿದ್ದೇನೆ ಈ ಬಾವಿಯ ನೀರು ಎಷ್ಟು ಸಿಹಿಯಾಗಿದೆ ಅಂತೀಯಾ ನೀನು ಸ್ವಲ್ಪ ರುಚಿ ನೋಡು ಎಂದಿತು ಮೇಕೆ ಹಿಂದೆ ಮುಂದೆ ಯೋಚಿಸದೇ ಬಾವಿಯೊಳಕ್ಕೆ ಜಿಗಿಯಿತು ನರಿ ಒಡನೆಯೇ ಮೇಕೆಯ ಬೆನ್ನ ಮೇಲೆ ಹತ್ತಿ ಹೊರಗೆ ಜಿಗಿಯಿತು ದಂಡೆಯ ಮೇಲೆ ನಿಂತು ನಮಸ್ಕಾರ ಮೇಕೆರಾಯ ನಿನಗೆ ಬೇಕು ಅನಿಸಿದಷ್ಟು ನೀರನ್ನು ಕುಡಿ ಎಂದು ಹೇಳಿ ಅಲ್ಲಿಂದ ಓಡಿ ಹೋಯಿತು

## ಪದ ಹುಡುಕಿರಿ

ಕೆಳಗೆ ನೀಡಲಾದ ಪದಗಳಲ್ಲಿರುವ ಅಕ್ಷರಗಳನ್ನು ಬಳಸಿಕೊಂಡು ಅರ್ಥಪೂರ್ಣವಾದ ಬೇರೆ ಪದಗಳನ್ನು ಕಂಡುಹಿಡಿದು ಬರೆಯಿರಿ.

- ಸಹಾಯಕರಾಗಿರುತ್ತಾರೆ - ಕರು, ರಾಗಿ , ........, ........, ........
- ಆನಂದವಾಗಿರುವುದನ್ನು - ........., ........, ........, ........
- ಮನೆಯಲ್ಲಿರಲಿ - ........, ........, ........, ........, ......., ........
- ಹೆಣೆದರಲ್ಲದೆ - ........, ......., ........., ........, ........, .........
- ಕರೆದುಕೊಂಡು - ........, ......., ........., ........, ........, .........


## ಭಿತ್ತಿಪತ್ರಿಕೆ ತಯಾರಿಸಿರಿ


ಗುಡಿಕೈಗಾರಿಕೆ/ಕುಲಕಸುಬುಗಳ ಬಗ್ಗೆ ಚಿತ್ರಗಳು, ಹಾಡುಗಳು ಹಾಗೂ ಲೇಖನಗಳನ್ನು ಸಂಗ್ರಹಿಸಿ ಭಿತ್ತಿ ಪತ್ರಿಕೆ ತಯಾರಿಸಿರಿ.


## ಪದಸೂರ್ಯ ಪೂರ್ತಿಗೊಳಿಸಿರಿ

ಕೆಳಗೆ ನೀಡಲಾದ ಪದಗಳನ್ನು ಅವುಗಳಿಗೆ ಸರಿಹೊಂದುವಲ್ಲಿ ಬರೆದು ಪದಸೂರ್ಯವನ್ನು ಪೂರ್ತಿಗೊಳಿಸಿರಿ.

ಕಲಿಸು, ಕಾಡು, ಊಟ, ತುಂಬ, ಸಾವಿತ್ರಿ, ಖರೀದಿಸು, ಹೆಚ್ಚು,
ಇಬ್ಬರು, ವ್ಯಾಪಾರಿ, ಬಿದಿರು, ಹೆಣೆಯು, ವಾಸಿಸು, ಹಣ, ಬುಟ್ಟಿ,
ಹುಲ್ಲು, ಮೂರು, ತಿಂಡಿ, ಹೇಳು, ಒಂದಿಷ್ಟು, ಹುಡುಗ, ನಡೆಯು



# ಪದಕೋಶ

ಅ

ಅಕ್ಕರೆ - ಪ್ರೀತಿ

ಅಗ್ರಜ - ಅಣ್ಣ

ಅಟ್ಟ - ಮೇಲ್ಮಾಳಿಗೆ,ಮಹಡಿ

ಅನಾದಿ - ಆದಿಯಿಲ್ಲದ,ಮೂಲವಿಲ್ಲದ

ಅನುನಾಸಿಕ – ಮೂಗಿನ ಸಹಾಯದಿಂದ ಉಚ್ಚಾರ ಮಾಡುವ ಅಕ್ಷರ

ಅನುಷ್ಠಾನ - ಆಚರಣೆ, ಆರಂಭ, ಬಳಕೆ

ಅರಿವು - ತಿಳುವಳಿಕೆ

ಅರಿವೆ - ಬಟ್ಟೆ

ಆ

ಆತ್ಮೀಯತೆ - ಅನ್ಯೋನ್ಯತೆ

ಉ

ಉಮ್ಮಳ – ತಳಮಳಿಕೆ,ಕಳವಳ

ಋ

ಋಣಿ - ಸಾಲವುಳ್ಳವನು, ಹಂಗಿಗೆ ಒಳಗಾದವನು

ಎ

ಎಡೆಹೊತ್ತು - ಸಂಧ್ಯಾ ಸಮಯ, ಹೊತ್ತಲ್ಲದ ಹೊತ್ತು.

ಎದೆಗುಂದು - ಧೈರ್ಯಗೆಡು

ಐ

ಐಶ್ವರ್ಯ - ಸಂಪತ್ತು, ಭಾಗ್ಯ

ಒ

ಒಕ್ಕಣ್ಣ - ಒಂದು ಕಣ್ಣು ಇರುವವ

ಓ

ಓರಣ - ಅಚ್ಚುಕಟ್ಟುತನ

ಕ

ಕಣ್ಣಿಡು - ದೃಷ್ಟಿಯನ್ನು ಹಾಕು, ಮನಸ್ಸು ಮಾಡು

ಕನ್ನಿಕಂಬ - ಮುಹೂರ್ತ ಕಂಬ

ಕಲಾಭಿಜ್ಞ - ಲಲಿತ ಕಲೆಗಳ ರಸಿಕ, ರಸಾಸ್ವಾದನಾ ಚತುರ

| | | |
|---|---|---|
| ಕಾಯಕ | - | ದುಡಿಮೆ, ಕಸುಬು. |
| ಕೂಡುಕಟ್ಟು | - | ಕೂಟ |
| ಕೂಳು | - | ಅನ್ನ |
| ಕೃತಜ್ಞತೆ | - | ಉಪಕಾರ ಸ್ಮರಣೆ ಇರುವ |
| ಕ್ರೋಧ | – | ಕೋಪ |

ಖ

| | | |
|---|---|---|
| ಖಂಡಿಸು | - | ಮಾತನ್ನು ತೆಗೆದು ಹಾಕು, ತುಂಡು ಮಾಡು |
| ಖರೀದಿಸು | - | ಬೆಲೆಕೊಟ್ಟು ಕೊಂಡುಕೊಳ್ಳುವಿಕೆ |
| ಖಾತ್ರಿ | - | ಭರವಸೆ, ನಂಬುಗೆ |

ಗ

| | | |
|---|---|---|
| ಗೆಲುವು | - | ಜಯ |
| ಗೋಗರೆಯು | - | ದೈನ್ಯದಿಂದ ಬೇಡಿಕೊಳ್ಳು |

ಘ

| | | |
|---|---|---|
| ಘ್ರಾಣಿಸು | - | ಮೂಸಿ ನೋಡು, ವಾಸನೆ ತಿಳಿ |

ಚ

| | | |
|---|---|---|
| ಚಿತ್ತಾರ | - | ರಂಗವಲ್ಲಿ |

ಛ

| | | |
|---|---|---|
| ಛಲ | - | ಹಠ, ದಿಟ್ಟ, ಹಟಮಾರಿತನ |

ಜ

| | | |
|---|---|---|
| ಜಮೀನು | - | ಭೂಮಿ, ನೆಲ |
| ಜೊಂಡುಹುಲ್ಲು | - | ಆನೆಹುಲ್ಲು |
| ಜೋಲು ಮುಖ | - | ಶಕ್ತಿಗುಂದಿದ ಮುಖ |

ಟ

| | | |
|---|---|---|
| ಟೀಕೆ | - | ತಪ್ಪನ್ನು ಎತ್ತಿ ತೋರಿಸುವಿಕೆ |

ತ

| | | |
|---|---|---|
| ತಟ್ಟುಗಳು | - | ಸಮತಲ ಪ್ರದೇಶಗಳು |
| ತಪ್ಪಲು | - | ಸಮಭೂಮಿ |
| ತಿಥಿ | - | ದಿನ,ಶ್ರಾದ್ಧ,ತಾರೀಕು |
| ತಿಳಲು | - | ತಿರುಳು |
| ತುಡಿತ | - | ಮಿಡಿತ, ಸ್ಪಂದನ |
| ತೆಂಗನ ಕಾಯಿ | - | ತೆಂಗಿನ ಕಾಯಿ |

| | | |
|---|---|---|
| ತ್ರಾಸ | – | ತೊಂದರೆ |
| | | **ದ** |
| ದಣಿವು | - | ಆಯಾಸ |
| ದುರ್ಗಂಧ | - | ಕೆಟ್ಟ ವಾಸನೆ |
| | | **ನ** |
| ನಾಣ್ಣುಡಿ | - | ಲೋಕೋಕ್ತಿ |
| ನಿಗದಿಪಡಿಸು | - | ಗೊತ್ತು ಮಾಡು |
| ನಿಂದಿಸು | - | ಬೈಯ್ಯು, ತಿರಸ್ಕರಿಸು |
| ನೇತ್ರ | – | ಕಣ್ಣು,ನಯನ,ಅಕ್ಷಿ |
| | | **ಪ** |
| ಪಕ್ಷಪಾತ | - | ಭೇದ |
| ಪೀಡೆ | - | ಬಾಧೆ,ತೊಂದರೆ |
| ಪ್ರಖ್ಯಾತ | - | ಬಹಳ ಪ್ರಸಿದ್ಧ |
| ಪ್ರತೀಕ | - | ಗುರುತು,ಪ್ರತಿರೂಪ,ಚಿಹ್ನೆ |
| ಪ್ರವೀಣ | - | ಪರಿಣತ |
| | | **ಬ** |
| ಬಂಜರು | - | ಪಾಳು ಭೂಮಿ, ಬೀಳು ನೆಲ |
| ಬಂಡು | - | ಮಕರಂದ,ಪರಾಗ |
| ಬರಡು | - | ಕೆಲಸಕ್ಕೆ ಬಾರದುದು,ನಿಷ್ಪ್ರಯೋಜಕ |
| ಬುವಿ | - | ಭೂಮಿ,ನೆಲ |
| ಬೆರಗು | - | ವಿಸ್ಮಯ,ಆಶ್ಚರ್ಯಪಡು |
| ಬೊಜ್ಜು | - | ಡೊಳ್ಳು ಹೊಟ್ಟೆ |
| ಬೋನ | - | ಅನ್ನ, ಆಹಾರ |
| | | **ಮ** |
| ಮಡಿ | - | ಶುದ್ಧ |
| ಮನವರಿಕೆ | - | ತಿಳುವಳಿಕೆ |
| ಮಮಕಾರ | - | ನನ್ನದೆಂಬುವ ದುರಭಿಮಾನ |
| ಮರುಗು | - | ದುಃಖಿಸು |
| ಮಾನ | - | ಗೌರವ, ಮರ್ಯಾದೆ |
| ಮಾರಿ | - | ಭಯಂಕರ ರೋಗ, ಉಪದ್ರವ |
| ಮುಷ್ಕರ | - | ಸತ್ಯಾಗ್ರಹ |

| | | |
|---|---|---|
| ಮೆಲಬಹುದು | - | ತಿನ್ನಬಹುದು |
| | | ಯ |
| ಯಶಸ್ಸು | - | ಕೀರ್ತಿ,ಖ್ಯಾತಿ,ಪ್ರಸಿದ್ಧಿ |
| | | ರ |
| ರಹಸ್ಯ | – | ಗುಟ್ಟು |
| | | ವ |
| ವಿದ್ಯುಕ್ತ | - | ವಿಧಿಯುಕ್ತ,ಶಾಸ್ತ್ರದಲ್ಲಿ ಹೇಳಿದ |
| ವಿಧವೆ | - | ಗಂಡ ಸತ್ತವಳು |
| ವೃದ್ಧಾಪ್ಯ | - | ಮುಪ್ಪು,ಮುದಿತನ |
| | | ಶ |
| ಶ್ರದ್ಧೆ | - | ನಂಬಿಕೆ, ವಿಶ್ವಾಸ |
| ಶ್ರೋತೃ | - | ಕೇಳುಗ |
| | | ಸ |
| ಸಂತಸ | - | ಸಂತೋಷ, ಆಹ್ಲಾದ |
| ಸಂಭ್ರಮ | - | ಸಡಗರ |
| ಸಮಾರಾಧನೆ | - | ವಿಜೃಂಭಣೆಯ ಊಟ, ಅನ್ನ ಸಂತರ್ಪಣೆ |
| ಸಲ್ಲದು | - | ತಕ್ಕುದಲ್ಲ,ಕೂಡದು |
| ಸವಿ | - | ಸಿಹಿರುಚಿ,ಮಧುರತೆ |
| ಸಿರಿ | - | ಸಂಪತ್ತು,ಸಂಪದ |
| ಸುತ | - | ಮಗ, ಪುತ್ರ |
| ಸುರಂಗ | - | ಗುಡ್ಡವನ್ನು ಕೊರೆದು ನಿರ್ಮಿಸಿದ ರಚನೆ |
| ಸೆಳಕು | - | ಆಕರ್ಷಣೆ, ಹೊಳಪು |
| ಸೆಳೆಯು | - | ಆಕರ್ಷಿಸು |
| | | ಹ |
| ಹರಟೆ | - | ಪೊಳ್ಳುಮಾತು,ವ್ಯರ್ಥಾಲಾಪ, ಸರಸ ಮಾತು |
| ಹಸನ | - | ನಿರ್ಮಲ, ಸ್ವಚ್ಛ |
| ಹೊಟ್ಟೆ ಬಾಕತನ | – | ಮಿತಿ ಮೀರಿ ತಿನ್ನುವುದು |
| ಹೊರೆ | - | ಭಾರ |

# ಟಿಪ್ಪಣಿ

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. ‘ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ’ ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in